
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಲಖನೌನಲ್ಲಿ ಗುರುವಾರ ಆರ್‌ಸಿಬಿ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ 49 ಎಸೆತಗಳಲ್ಲಿ ಶತಕ ಗಳಿಸಿದ ಲಖನೌ ಸೂಪರ್ ಜೈಂಟ್ಸ್ ತಂಡದ ಮಿಚೆಲ್ ಮಾರ್ಷ್


08 ಮೇ 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 58 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ಕ್ಯೂನಲ್ಲಿ ಶಿವಣ್ಣ, ಗಣೇಶ್, ಡಾಲಿ » 2



ಬೇಲೂರು : 15 ಬಡ ಕುಟುಂಬಗಳಿಗೆ ಹಕ್ಕುಪತ್ರ ವಿತರಣೆ » 3



ಬಿಹಾರ ಸಚಿವರ ಸಂಪುಟ ವಿಸ್ತರಣೆ » 4


# ಪಶ್ಚಿಮ ಬಂಗಾಳ ವಿಧಾನಸಭೆ ವಿಸರ್ಜನೆ

## ರಾಜೀನಾಮೆ ನೀಡದ ಮಮತಾ ಮಂತ್ರಿಮಂಡಲವೇ ವಜಾ | ವೀಟೋ ಅಧಿಕಾರ ಬಳಸಿದ ರಾಜ್ಯಪಾಲರು

• ಪ್ರಜೋದಯ ವರದಿ

**ನವದೆಹಲಿ:** ಪಶ್ಚಿಮ ಬಂಗಾಳ ರಾಜಕೀಯದಲ್ಲಿ ಭುಗಿಲೆದಿದ್ದ ಸಾಂವಿಧಾನಿಕ ಬಿಕ್ಕಟ್ಟನ್ನು, ರಾಜ್ಯಪಾಲ ಆರ್.ಎನ್.ರವಿ ಅವರು ತಮ್ಮ ವಿಶೇಷ ಅಧಿಕಾರವನ್ನು ಬಳಸಿಕೊಂಡು ಮಮತಾ ಬ್ಯಾನರ್ಜಿ ನೇತೃತ್ವದ ಸಂಪುಟವನ್ನು ವಜಾಗೊಳಿಸಿ, ವಿಧಾನಸಭೆಯನ್ನು ವಿಸರ್ಜಿಸಿದ್ದಾರೆ.

ಚುನಾವಣೆಯಲ್ಲಿ ಸೋತ ನಂತರವೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ರಾಜೀನಾಮೆ ನೀಡಲು ನಿರಾಕರಿಸಿದ ನಡುವೆ, ರಾಜ್ಯಪಾಲರು ತಮ್ಮ ಸಾಂವಿಧಾನಿಕ ವೀಟೋ ಬಳಸಿ ವಿಧಾನಸಭೆ ವಿಸರ್ಜಿಸಿ ಅಧಿಸೂಚನೆ ಹೊರಡಿಸಿದ್ದಾರೆ. ಈ ಐತಿಹಾಸಿಕ ನಿರ್ಧಾರವನ್ನು ಭಾರತೀಯ ಸಂವಿಧಾನದ 174(2)(ಬಿ) ವಿಧಿಯ ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ. ರಾಜ್ಯಪಾಲರ ಸೂಚನೆಯ ಮೇರೆಗೆ ಮುಖ್ಯ ಕಾರ್ಯದರ್ಶಿ ದುಷ್ಯಂತ್ ನರಿಯಾಲ ಅವರು ಈ ಆದೇಶ



ಹೊರಡಿಸಿದ್ದಾರೆ. ರಾಜ್ಯಪಾಲರ ಈ ಕಠಿಣ ಕ್ರಮವು ಬಂಗಾಳದ ರಾಜಕೀಯದಲ್ಲಿ ಕೋಲಾಹಲವನ್ನು ಸೃಷ್ಟಿಸಿದೆ. ಇದೀಗ ಸಂಪುಟ ಮತ್ತು ವಿಧಾನಸಭೆ ಎರಡೂ ತಕ್ಷಣದಿಂದ ಜಾರಿಗೆ ಬರುವಂತೆ ವಿಸರ್ಜಿಸಲ್ಪಟ್ಟಿವೆ.

ಭಾರತದ ಸಂವಿಧಾನದ 172ನೇ ವಿಧಿಯ ಪ್ರಕಾರ, ವಿಧಾನಸಭೆಯು ತನ್ನ ಮೊದಲ ಸಭೆಯಿಂದ ಐದು ವರ್ಷಗಳ ಅವಧಿಯನ್ನು ಪೂರೈಸಿದ ನಂತರ ಸ್ವಯಂ ಚಾಲಿತವಾಗಿ ವಿಸರ್ಜನೆಯಾಗುತ್ತದೆ. ಅದರಂತೆ 2021ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಸಭೆಯ ಅವಧಿಯು ಗುರುವಾರಕ್ಕೆ ಪೂರ್ಣಗೊಂಡಿದ್ದು 17ನೇ ವಿಧಾನಸಭೆ ಅವಧಿ ಅಧಿಕೃತವಾಗಿ ಅಂತ್ಯಗೊಂಡಿದೆ.

ಅಂತ್ಯಗೊಂಡ ಬೆನ್ನಲ್ಲೇ ಆರ್.ಎನ್.ರವಿ ಅವರು ಸಂವಿಧಾನದ 164(1)ನೇ ವಿಧಿಯಡಿ ಮೇ.7 ರಿಂದ ಜಾರಿಗೆ ಬರುವಂತೆ ಮಮತಾ ಬ್ಯಾನರ್ಜಿ ನೇತೃತ್ವದ ಸಚಿವ ಸಂಪುಟವನ್ನು ವಜಾ ಗೊಳಿಸಿ ವಿಧಾನಸಭೆಯನ್ನು ವಿಸರ್ಜಿಸಿದ್ದಾರೆ.

ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಬಿಜೆಪಿ 207 ಸ್ಥಾನಗಳನ್ನು ಗೆಲ್ಲುವ ಮೂಲಕ ಸ್ಪಷ್ಟ ಬಹುಮತ ಪಡೆದಿದೆ. ಟಿಎಂಸಿ 80 ಸ್ಥಾನಗಳಿಗೆ ಕುಸಿದಿದೆ. ಸ್ವತಃ ಮಮತಾ ಬ್ಯಾನರ್ಜಿ ಅವರು ಭವಾನಿಪುರ ಕ್ಷೇತ್ರದಲ್ಲಿ ಸುಮಾರು 15 ಸಾವಿರ ಮತಗಳ ಅಂತರದಿಂದ ಸೋಲನುಭವಿಸಿದ್ದಾರೆ.

ರಾಜ್ಯಪಾಲರು ಈಗ ಚುನಾವಣೆಯಲ್ಲಿ ಬಹುಮತ ಸಾಧಿಸಿರುವ ಬಿಜೆಪಿ ಪಕ್ಷಕ್ಕೆ ಸರ್ಕಾರ ರಚಿಸಲು ಆಹ್ವಾನ ನೀಡಲಿದ್ದಾರೆ. ಮೇ 9ರಂದು ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವ ಸಾಧ್ಯತೆ ಇದೆ.

### ವಿಜಯ್‌ಗೆ ಬಹುಮತದ ಸಂಕಷ್ಟ



ತಮಿಳುನಾಡಿನಲ್ಲಿ ವಿಜಯ್ ನೇತೃತ್ವದ ಟಿವಿಕೆ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ಕೂಡ ಸರ್ಕಾರ ರಚನೆಗೆ ಬಹುಮತದ ಸಮಸ್ಯೆ ಕಾಡತೊಡಗಿದೆ. ಗುರುವಾರ ಬೆಳಿಗ್ಗೆ ವಿಜಯ್ ಅವರನ್ನು ರಾಜಭವನಕ್ಕೆ ಕರೆಸಿಕೊಂಡ ರಾಜ್ಯಪಾಲ ಆರ್.ವಿ.ಅರ್ಲೇಕರ್, ಮೊದಲು 118 ಶಾಸಕರ ಬೆಂಬಲವಿರುವ ಅಧಿಕೃತ ಪತ್ರ ತನ್ನಿ ಎಂದು ಕಠಿಣ ಷರತ್ತು ವಿಧಿಸಿದ್ದಾರೆ. ಎರಡು ದಿನಗಳಲ್ಲಿ ರಾಜ್ಯಪಾಲರನ್ನು ವಿಜಯ್ ಎರಡನೇ ಬಾರಿ ಭೇಟಿಯಾಗಿದ್ದು, ಸಂವಿಧಾನದ ಚೌಕಟ್ಟಿನೊಳಗೆ ಹಲವು ಪ್ರಶ್ನೆಗಳನ್ನ ಎದುರಿಸಿದ್ದಾರೆ. ಕೇವಲ 113 ಶಾಸಕರನ್ನು (ಟಿವಿಕೆ 108 + ಕಾಂಗ್ರೆಸ್ 5) ಇಟ್ಟುಕೊಂಡು ಸರ್ಕಾರ ಹೇಗೆ ನಡೆಸುತ್ತೀರಿ ಎಂಬ ಪ್ರಶ್ನೆ ಎತ್ತಿದ್ದಾರೆ. ಹೀಗಿದ್ದರೂ ಸಿಪಿಐ, ಸಿಪಿಐ(ಎಂ), ವಿಸಿಕೆ ಮತ್ತು ಪಿಎಂಕೆ ಪಕ್ಷಗಳ ಬೆಂಬಲದೊಂದಿಗೆ ನಮ್ಮ ಸಂಖ್ಯಾಬಲ 123ಕ್ಕೆ ಏರಲಿದೆ. ಬಹುಮತ ಸಾಬೀತು ಪಡಿಸಲು ನಾನು ಸಿದ್ಧ ಎಂದು ವಿಜಯ್ ಹೇಳಿದ್ದಾರೆ. ಆದರೆ, ಬಾಯಿಮಾತಿನ ಭರವಸೆಗೆ ರಾಜ್ಯಪಾಲರು ಒಪ್ಪುತ್ತಿಲ್ಲ ಎನ್ನಲಾಗಿದೆ.

# ಕುಡಿಯುವ ನೀರಿಗೆ ಸಮಸ್ಯೆಯಾದರೆ ಕಠಿಣ ಕ್ರಮ

## ಪಿಡಿಓಗಳಿಗೆ ಶಾಸಕ ಎ.ಮಂಜು ಎಚ್ಚರಿಕೆ

• ಪ್ರಜೋದಯ ವರದಿ

**ಅರಕಲಗೂಡು :** ಕುಂಟು ನೆಪಗಳನ್ನು ಮುಂದೊಡ್ಡದೆ ಕುಡಿಯುವ ನೀರು ಸರಬರಾಜಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ತುರ್ತು ಕ್ರಮ ಕೈಗೊಳ್ಳುವಂತೆ ಶಾಸಕ ಎ.ಮಂಜು ಅವರು ಸೆಸ್ಕ್ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಜಲಜೀವನ್, ವಿದ್ಯುತ್ ಇಲಾಖೆ ಮತ್ತು ಗ್ರಾಮ ಪಂಚಾಯಿತಿ ಪಿಡಿಓ ಗಳ ಸಭೆ ನಡೆಸಿ ಕುಡಿಯುವ ನೀರಿನ ಸಮಸ್ಯೆ ಕುರಿತು ಪರಿಶೀಲನೆ ನಡೆಸಿದ ಅವರು, ಬಿರು ಬೇಸಿಗೆಯಿಂದ ಜನರು ಹೈರಾಣಾಗಿದ್ದಾರೆ. ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ಸಮಸ್ಯೆಯಾಗಬಾರದು. ಸಮಸ್ಯೆ ಇದ್ದರೆ ಪರಿಹಾರಕ್ಕೆ ತುರ್ತು ಕ್ರಮ ವಹಿಸುವಂತೆ ಸೂಚಿಸಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಮಸ್ಯೆ ಇರುವ ಗ್ರಾಮಗಳಲ್ಲಿ ಹೊಸದಾಗಿ ಕೊಳವೆ ಬಾವಿಗಳನ್ನು ತೆಗೆಸಿದ್ದು, ಇದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿ ಸೆಸ್ಕ್‌ಗೆ ಮನವಿ ಸಲ್ಲಿಸಿದ್ದರೂ ಕ್ರಮ ವಹಿಸಿಲ್ಲವೆಂದು ಪಿಡಿಓಗಳು ಸಮಸ್ಯೆ ಹೇಳಿಕೊಂಡರು.



ಕುಡಿಯುವ ನೀರಿಗೆ ಪ್ರಥಮ ಆದ್ಯತೆ ನೀಡಿ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಸರ್ಕಾರದ ಸ್ಪಷ್ಟ ಸೂಚನೆ ಇದೆ. ಒಂದು ವಾರದಲ್ಲಿ ಅಗತ್ಯವಿರುವ ಕಡೆಗಳಲ್ಲಿ ಸಂಪರ್ಕ ಕಲ್ಪಿಸಬೇಕು. ಮುಂದಿನ ವಾರದಲ್ಲಿ ಮತ್ತೆ ಸಭೆ ನಡೆಸಿ ಈ ಕುರಿತು ಪರಿಶೀಲನೆ ನಡೆಸಲಾಗುವುದು. ನಿರ್ಲಕ್ಷ್ಯ ವಹಿಸಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.

ನೀರಿನ ಸಮಸ್ಯೆ ಇರುವಲ್ಲಿ ಜಲ ಜೀವನ್ ಮಿಷನ್ ಕುಡಿಯುವ ನೀರು ಸರಬರಾಜಿಗೆ ಕೊಳವೆ ಬಾವಿಗಳನ್ನು ತೆಗೆಸಿಲ್ಲದ ಕಡೆ ಅಧಿಕಾರಿಗಳ ಗಮನಕ್ಕೆ ತಂದು ಬಾವಿ ಕೊರೆಸಲು ಪಿಡಿಓಗಳು ಮುಂದಾಗಬೇಕು. ಜಲ ಜೀವನ್ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಲು ಅಧಿಕಾರಿಗಳು ಕ್ರಮ ವಹಿಸಬೇಕು. ಕಾಮಗಾರಿ ಪೂರ್ಣಗೊಂಡು ವ್ಯವಸ್ಥಿತವಾಗಿ ನೀರು ಸರಬರಾಜಾಗುತ್ತಿದೆಯೇ ಎಂಬುದು ಖಾತ್ರಿ ಪಟ್ಟ ನಂತರವೇ ಎನ್‌ಒಸಿ ನೀಡಬೇಕ ಇಲ್ಲದಿದ್ದರೆ ಪಿಡಿಒಗಳನ್ನೇ ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ ಎಂದು ತಿಳಿಸಿದರು. ತಹಶೀಲ್ದಾರ್ ಕೆ.ಸಿ.ಸೌಮ್ಯ, ತಾಲ್ಲೂಕು ಪಂಚಾಯಿತಿ ಇಒ ಶ್ರೀನಿವಾಸ್ ಇದ್ದರು.

# ಪತ್ರಕರ್ತರು-ಅಧಿಕಾರಿಗಳ ನಡುವೆ ಕ್ರಿಕೆಟ್ ಪಂದ್ಯಾವಳಿ

## ಮೇ 9-10ರಂದು ಪತ್ರಕರ್ತರ ಸಂಘದಿಂದ ಆಯೋಜನೆ: ಜೆ.ಆರ್.ಕೆಂಚೇಗೌಡ





• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಮೇ 9 ಮತ್ತು 10 ರಂದು ಪತ್ರಕರ್ತರು ಹಾಗು ವಿವಿಧ ಸರ್ಕಾರಿ ಇಲಾಖೆಗಳ ತಂಡಗಳೊಂದಿಗೆ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿಯನ್ನು ನಗರದ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2 ದಿನಗಳ ಕ್ರೀಡಾ ಕೂಟದಲ್ಲಿ ಜನಪ್ರತಿನಿಧಿಗಳ ತಂಡ, ಪತ್ರಕರ್ತರ ತಂಡ ಹಾಗು ವಿವಿಧ ಇಲಾಖೆಗಳ ಅಧಿಕಾರಿಗಳ ತಂಡ ಸೇರಿ ಒಟ್ಟು 16 ತಂಡಗಳು ಭಾಗಿಯಾಗಲಿವೆ. ಕ್ರೀಡಾ ಕೂಟ ಯಶಸ್ಸಿಗೆ ಎಲ್ಲಾ ರೀತಿಯ ಸಿದ್ಧತೆ ನಡೆದಿದ್ದು, ನಗರ ಹಾಗು ಜಿಲ್ಲೆಯ ಎಲ್ಲಾ ಪತ್ರಕರ್ತರು ಆಗಮಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಪಂದ್ಯಾವಳಿಗೆ ಚಾಲನೆ ನೀಡುವರು. ಶಾಸಕ ಹೆಚ್.ಪಿ.ಸ್ವರೂಪ್, ಸಂಸದ ಶ್ರೇಯಸ್ ಪಟೇಲ್, ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ. ಮದನಗೌಡ ಮತ್ತಿತರರು ಭಾಗವಹಿಸಲಿದ್ದಾರೆ. ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ತಂಡಗಳನ್ನು ಪರಿಚಯ ಮಾಡಿಕೊಡಲಿದ್ದಾರೆಂದು ಹೇಳಿದರು.

ಸಂಘದ ಉಪಾಧ್ಯಕ್ಷ ಎನ್. ನಂಜುಂಡೇಗೌಡ ಅವರು ಮಾತನಾಡಿ, ಪತ್ರಕರ್ತರು ಹಾಗು ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ನಡುವೆ ಉತ್ತಮ ಬಾಂಧವ್ಯ ಬೆಸೆಯುವ ಉದ್ದೇಶದಿಂದ ಈ ಕ್ರೀಡಾ ಕೂಟ ವಿಶೇಷ ಮತ್ತು ಮಹತ್ವದ್ದಾಗಿದೆ. ಪಂದ್ಯಾವಳಿಯಲ್ಲಿ ವಿಜೇತ ತಂಡಕ್ಕೆ 25 ಸಾವಿರ ಪ್ರಥಮ ಬಹುಮಾನ ಹಾಗು ಆಕರ್ಷಕ ಟ್ರೋಫಿ, ರನ್ನರ್ ಅಪ್ ತಂಡಕ್ಕೆ 15 ಸಾವಿರ ಬಹುಮಾನ ಹಾಗು ಟ್ರೋಫಿ, 3ನೇ ವಿಜೇತ ತಂಡದಕ್ಕೆ 10 ಸಾವಿರ ನಗದು ಹಾಗು ಟ್ರೋಫಿ ನೀಡಲಾಗುವುದೆಂದರು.

ಉಪಾಧ್ಯಕ್ಷ ಜಿ.ಪ್ರಕಾಶ್ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಖಜಾಂಚಿ ಜಿ.ಪ್ರಕಾಶ್ ಇದ್ದರು.

# ಕುಡಿಯುವ ನೀರು ಸಂಕಷ್ಟ ನಿವಾರಣೆಗೆ ನಾಲೆಗಳಿಗೆ ನೀರು

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

- ಮೇ 10ರಿಂದ 19ರವರೆಗೆ ಹೇಮಾವತಿ ಎಡದಂಡೆ ನಾಲೆಯಲ್ಲಿ ನೀರಿನ ಹರಿವು
- ಸಲಹಾ ಸಮಿತಿಯ ಸಭೆಯಲ್ಲಿ ನಿರ್ಣಯ

**ಹಾಸನ:** ತೀವ್ರ ಬೇಸಿಗೆ, ಕುಸಿದ ಅಂತರ್ಜಲ ಮಟ್ಟ, ಒಣಗುತ್ತಿರುವ ಕೆರೆ-ಕಟ್ಟೆಗಳು ಹಾಗು ಗ್ರಾಮೀಣ ಭಾಗದಲ್ಲಿ ಉಲ್ಬಣಿಸಿರುವ ಕುಡಿಯುವ ನೀರಿನ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಹೇಮಾವತಿ ಜಲಾಶಯದಿಂದ ಎಡದಂಡೆ ನಾಲೆ ಮೂಲಕ ನೀರು ಹರಿಸಲು ಸರ್ಕಾರ ಮುಂದಾಗಿದೆ.

ಇತ್ತೀಚೆಗೆ ನಡೆದ ಹೇಮಾವತಿ ಜಲಾಶಯ ಯೋಜನೆಯ ಕುಡಿಯುವ ನೀರಿನ ಸಲಹಾ ಸಮಿತಿಯ ಸಭೆಯ ನಿರ್ಣಯದಂತೆ ಮೇ 10ರಿಂದ ಮೇ 19ರವರೆಗೆ ಹೇಮಾವತಿ ಅಣೆಕಟ್ಟೆ ವ್ಯಾಪ್ತಿಯ ಎಡದಂಡೆ ನಾಲೆಯ ಮೂಲಕ ನೀರು ಹರಿಸಲು ತೀರ್ಮಾನಿಸಲಾಗಿದೆ.

ಹೇಮಾವತಿ ಜಲಾಶಯವು ಒಟ್ಟು 37.10 ಎಂಎಂಸಿ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ. ಪ್ರಸ್ತುತ 17.126 ಟಿಎಂಸಿ ನೀರು ಲಭ್ಯವಿದ್ದು, ಅದರಲ್ಲಿ ಕುಡಿಯುವ ನೀರಿಗಾಗಿ ಮೀಸಲಿಟ್ಟ ಪ್ರಮಾಣವನ್ನು ಮಾತ್ರ ಬಳಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ. ಈ ನೀರನ್ನು ಎಡದಂಡೆ ನಾಲೆಯ ಮೂಲಕ ಕೆರೆ, ಕಟ್ಟೆ ಹಾಗು ಪ್ರಮುಖ ಕುಡಿಯುವ ನೀರಿನ ಮೂಲಗಳಿಗೆ ಹರಿಸಲಾಗುತ್ತದೆ. ಈ ನೀರನ್ನು ಸಂಪೂರ್ಣವಾಗಿ ಕುಡಿಯುವ ನೀರಿನ ಉದ್ದೇಶವಾಗಿದ್ದು, ಯಾವುದೇ ಕೃಷಿ ಚಟುವಟಿಕೆಗಳಿಗೆ ನೀರನ್ನು ಬಳಸಬಾರದೆಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

### ಜಲಾಶಯದ ನೀರಿನ ಮಟ್ಟ

ಹೇಮಾವತಿ ಜಲಾಶಯದ ಗರಿಷ್ಠ ಮಟ್ಟ 2922.00 ಅಡಿಗಳಾಗಿದ್ದು, ಗುರುವಾರ ನೀರಿನ ಮಟ್ಟ 2895.46 ಅಡಿಗಳಷ್ಟಿದೆ. 37.103 ಟಿಎಂಸಿ ಗರಿಷ್ಠ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದ್ದು, ಪ್ರಸ್ತುತ 17.126 ಟಿಎಂಸಿ ನೀರಿನ ಸಂಗ್ರಹವಾಗಿದೆ. 49 ಕ್ಯೂಸೆಕ್ ಒಳಹರಿವಿದೆ. 300 ಕ್ಯೂಸೆಕ್ ಹೊರಹರಿವಿವೆ.

**ಬೇಸಿಗೆಯ ತೀವ್ರತೆ, ಹೆಚ್ಚಿದ ನೀರಿನ ಬೇಡಿಕೆ**

ಈ ವರ್ಷ ಹಾಸನ ಸೇರಿ ದಕ್ಷಿಣ ಒಳನಾಡಿನ ಹಲವೆಡೆ ಉಷ್ಣಾಂಶ ಏರಿಕೆಯಾಗಿದ್ದು, ಮಳೆಯ ಕೊರತೆಯಿಂದ ಜಲಮೂಲಗಳು ಬತ್ತಲಾರಂಭಿಸಿವೆ. ಗ್ರಾಮೀಣ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳು ಒಣಗಿರುವುದರಿಂದ ಕುಡಿಯುವ ನೀರಿನ ಪೂರೈಕೆ ದೊಡ್ಡ ಸವಾಲಾಗಿತ್ತು. ಅನೇಕ ಗ್ರಾಮ ಪಂಚಾಯಿತಿಗಳು ಟ್ಯಾಂಕರ್‌ಗಳ ಮೂಲಕ ನೀರು ಪೂರೈಸುವ ಪರಿಸ್ಥಿತಿ ಎದುರಿಸುತ್ತಿದ್ದವು. ಈ ಹಿನ್ನಲೆಯಲ್ಲಿ ಜನ ಹಾಗು ಜಾನುವಾರುಗಳಿಗೆ ನೀರಿನ ತೊಂದರೆ ಉಂಟಾಗದಂತೆ ಮುಂಜಾಗ್ರತಾ ಕ್ರಮವಾಗಿ ನಾಲೆಗಳಿಗೆ ನೀರು ಹರಿಸಲು ನಿರ್ಧರಿಸಲಾಗಿದೆ. ನೀರು ಹರಿಸುವುದರಿಂದ ಜಿಲ್ಲೆಯ ಅನೇಕ ಭಾಗಗಳ ಜೊತೆಗೆ ತುಮಕೂರು, ಮಂಡ್ಯ ಮತ್ತು ಮೈಸೂರು ಜಿಲ್ಲೆಯ ಕೆಲವು ಪ್ರದೇಶಗಳಿಗೂ ಅನುಕೂಲವಾಗಲಿದೆ.

> **ಹೇಮಾವತಿಯೋಜನಾ ವ್ಯಾಪ್ತಿಯಲ್ಲಿನ ಸಾರ್ವಜನಿಕರು ಹಾಗು ಅಚ್ಚುಕಟ್ಟುದಾರರು ನೀರಿನ ಸಮರ್ಪಕ ನಿರ್ವಹಣೆಗೆ ಇಲಾಖೆಯೊಂದಿಗೆ ಸಹಕರಿಸಬೇಕು. ಕುಡಿಯುವ ನೀರಿನ ಉದ್ದೇಶಕ್ಕೆ ಮಾತ್ರ ಈ ನೀರನ್ನು ಬಳಸಬೇಕು.**
>
> **-ಜಿ.ಕೆ.ಜ್ಯೋತಿ, ಸೂಪರಿಂಟೆಂಡಿಂಗ್ ಇಂಜಿನೀಯರ್ ಹೇಮಾವತಿ ಯೋಜನಾ ವೃತ್ತ, ಗೊರೂರು**

ಹೇಮಾವತಿ ಎಡದಂಡೆ ನಾಲೆ ವ್ಯಾಪ್ತಿಯಲ್ಲಿರುವ ನೂರಾರು ಕೆರೆಗಳು ಕಳೆದ ಕೆಲವು ತಿಂಗಳುಗಳಿಂದ ಬಹುತೇಕ ಬತ್ತಿ ಹೋಗಿದ್ದವು. ನಾಲೆಗಳಿಗೆ ನೀರು ಹರಿದರೆ ಕೆರೆಗಳು ತುಂಬಿ ಸುತ್ತಮುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರಿನ ಮೂಲಗಳು ಪುನಶ್ಚೇತನಗೊಳ್ಳುವ ನಿರೀಕ್ಷೆ ವ್ಯಕ್ತವಾಗಿದೆ.

**ನೀರಿನ ದುರುಪಯೋಗಕ್ಕೆ ಅವಕಾಶವಿಲ್ಲ**

ಜಿಲ್ಲಾಡಳಿತ ಹಾಗು ಹೇಮಾವತಿ ಯೋಜನಾ ಅಧಿಕಾರಿಗಳು ನೀರಿನ ಬಳಕೆಯಲ್ಲಿ ಎಚ್ಚರಿಕೆ ವಹಿಸಿದ್ದಾರೆ. ನಾಲೆಗಳಲ್ಲಿ ಹರಿಯುವ ನೀರನ್ನು ಕೃಷಿಗೆ ತಿರುಗಿಸಬಾರದೆಂದು ಅಧಿಕಾರಿಗಳು ಸೂಚಿಸಿದ್ದು, ಅಚ್ಚುಕಟ್ಟು ಪ್ರದೇಶದ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ.

ನೀರಿನ ಸೋರಿಕೆ, ಅಕ್ರಮ ತಡೆಗಟ್ಟಲು ವಿಶೇಷ ನಿಗಾ ವಹಿಸಲು ಸೂಚಿಸಲಾಗಿದೆ. ನಾಲೆಗಳ ಬದಿಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುವುದು, ಅಗತ್ಯವಿದ್ದಲ್ಲಿ ಪೊಲೀಸ್ ಇಲಾಖೆ ಹಾಗು ಸ್ಥಳೀಯ ಆಡಳಿತದ ಸಹಕಾರ ಪಡೆಯಲಾಗುವುದೆಂದು ಹೇಮಾವತಿ ಜಲಾಶಯ ಯೋಜನೆ ಅಧಿಕಾರಿಗಳು ತಿಳಿಸಿದ್ದಾರೆ.

ನಾಲೆಗಳಿಗೆ ನೀರು ಹರಿಸುವ ಕ್ರಮ ತಾತ್ಕಾಲಿಕವಾಗಿದ್ದು, ಪೂರ್ವ ಮುಂಗಾರು ಮಳೆಯ ಸ್ಥಿತಿಗತಿಗಳನ್ನು ಅವಲೋಕಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುತ್ತದೆ. ಜಲಾನಯನ ಪ್ರದೇಶಗಳಲ್ಲಿ ಸಮರ್ಪಕ ಮಳೆಯಾದರೆ ನಾಲೆ ನೀರು ಹರಿಸುವ ಅವಧಿಯನ್ನು ಕಡಿಮೆ ಮಾಡುವ ಸಾಧ್ಯತೆ ಇದೆ. ಮಳೆಯ ಕೊರತೆ ಮುಂದುವರಿದರೆ ಕುಡಿಯುವ ನೀರಿನ ಅಗತ್ಯಕ್ಕೆ ಅನುಗುಣವಾಗಿ ಮತ್ತಷ್ಟು ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.



### ಎಡದಂಡೆ ನಾಲೆ ನೀರು ಎಲ್ಲೆಲ್ಲಿಗೆ

ಹೇಮಾವತಿ ಜಲಾಶಯದ (ಗೊರೂರು ಅಣೆಕಟ್ಟೆ) ಎಡದಂಡೆ ನಾಲೆ ಹಾಸನ, ತುಮಕೂರು ಮತ್ತು ಮಂಡ್ಯ ಜಿಲ್ಲೆಗಳ ಸುಮಾರು 195,000 ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸುವ 214 ಕಿ.ಮೀ. ಉದ್ದದ ಪ್ರಮುಖ ಕಾಲುವೆಯಾಗಿದೆ. ಈ ನಾಲೆಯು ಪ್ರಮುಖವಾಗಿ ಬಾಗೂರು-ನವಿಲೆ ಸುರಂಗ ಮಾರ್ಗದ ಮೂಲಕ ನೀರನ್ನು ಹರಿಸಿ, ತುಮಕೂರು ಭಾಗದಲ್ಲಿನ ಕೆರೆಗಳನ್ನು ತುಂಬಿಸಲು ಸಹಾಯ ಮಾಡುತ್ತದೆ. ತುಮಕೂರು ಭಾಗದ ನಾಲೆ ಸುಮಾರು 2400 ಕ್ಯೂಸೆಕ್ ನೀರು ಹರಿಸುವ ಸಾಮರ್ಥ್ಯ ಹೊಂದಿದೆ.

# ಭೋವಿ ಅಭಿವೃದ್ಧಿ ನಿಗಮ ಅಧ್ಯಕ್ಷರ ಪ್ರವಾಸ

• ಪ್ರಜೋದಯ ವರದಿ

**ಹಾಸನ :** ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಅವರು ಮೇ 08 ರಂದು ಜಿಲ್ಲೆಯಲ್ಲಿ ಪ್ರವಾಸ ಮಾಡಲಿದ್ದಾರೆ. ಶುಕ್ರವಾರ ಬೆಳಿಗ್ಗೆ 10.30ಕ್ಕೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಮತ್ತು ಭೋವಿ ಸಮುದಾಯದ ಮುಖಂಡರುಗಳೊಂದಿಗೆ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಆಲೂರು ತಾಲ್ಲೂಕು, ಕೆಂಚಮ್ಮ ಹೊಸಕೋಟೆ ಹೋಬಳಿ ಜಯಂತಿ ನಗರಕ್ಕೆ ಭೇಟಿ ನೀಡಲಿದ್ದಾರೆ.

# ಮರಗಸಿ ವೇಳೆ ವಿದ್ಯುತ್ ತಾಗಿ ಕಾರ್ಮಿಕ ಸಾವು

• ಪ್ರಜೋದಯ ವರದಿ

**ಸಕಲೇಶಪುರ:** ಮರಗಸಿ ಮಾಡುತ್ತಿದ್ದ ಸಂದರ್ಭದಲ್ಲಿ ವಿದ್ಯುತ್ ತಂತಿಗೆ ಏಣಿ ತಗುಲಿ ಕಾರ್ಮಿಕ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹೊಸಗದ್ದೆ ಗ್ರಾಮದದಲ್ಲಿ ನಡೆದಿದೆ.

ತಾಲ್ಲೂಕಿನ ಬೆಳಗೋಡು ಹೋಬಳಿ ರಾಜೇಂದ್ರಪುರ ಗ್ರಾಮದ ದುಶ್ಯಂತ್ (40) ಮೃತ ಕಾರ್ಮಿಕ. ಹೊಸಗದ್ದೆ ಗ್ರಾಮದಲ್ಲಿದ್ದ ಬಿ.ಡಿ. ಮೋಹನ್ ಅವರ ತೋಟದಲ್ಲಿ ದುಶ್ಯಂತ್ ಅಲ್ಯೂಮಿನಿಯಂ ಏಣಿ ಬಳಸಿ ಮರಗಸಿ ಮಾಡಿದ ನಂತರ ಇನ್ನೊಂದು ಮರ ಕಡಿಯಲು ಏಣಿಯನ್ನು ಪಕ್ಕದ ಮರಕ್ಕೆ ಹತ್ತಲು ತೆಗೆದುಕೊಂಡು ಹೋಗುವಾಗ ತೋಟದ ಮೇಲೆ ಹಾದು ಹೋಗಿದ್ದ ವಿದ್ಯುತ್ ತಂತಿಗೆ ಏಣಿ ತಾಗಿ ವಿದ್ಯುತ್ ಹರಿದು ಅಸ್ವಸ್ಥಗೊಂಡಿದ್ದ ಆತನನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಸಾಗಿಸುವ ವೇಳೆ ಮೃತಪಟ್ಟಿದ್ದಾರೆ.

ಮುಂಜಾಗೃತಾ ಕ್ರಮ ಅನುಸರಿಸದೆ ನಿರ್ಲಕ್ಷ್ಯತೆಯಿಂದ ವಿದ್ಯುತ್ ತಂತಿ ಹಾದು ಹೋಗಿರುವ ಜಾಗದಲ್ಲಿ ದುಶ್ಯಂತ್‌ಗೆ ಅಲ್ಯೂಮಿನಿಯಂ ಏಣಿ ಬಳಸಿ ಮರಗಸಿ ಮಾಡಲು ತಿಳಿಸಿದ ತೋಟದ ಮಾಲೀಕ ಮೋಹನ್ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ ಮೃತರ ಪತ್ನಿ ಉಷಾ ಅವರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

# ಬೇಲೂರಿಗಿಂದು ಅರಣ್ಯ ಸಚಿವರ ಭೇಟಿ

**ಬೇಲೂರು:** ಅರಣ್ಯ ಸಚಿವ ಈಶ್ವರ್ ಖಂಡ್ರೆ, ಅವರು ಶುಕ್ರವಾರ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಬೆಳಿಗ್ಗೆ 11.30ಕ್ಕೆ ಆಗಮಿಸುವರು.

ಪಟ್ಟಣದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಸಮುದಾಯ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಮಹಿಳಾ ಮತ್ತು ಯುವ ಘಟಕದಿಂದ ಹಮ್ಮಿಕೊಂಡಿರುವ ಬಸವೇಶ್ವರ ಜಯಂತಿ ಹಾಗು ಅಭಿನಂದನಾ ಕಾರ್ಯ ಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 1.30ಕ್ಕೆ ಜಿಲ್ಲಾ ಅರಣ್ಯ ಮತ್ತು ಪರಿಸರ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಿದ್ದಾರೆ.

# ಕಾಫಿ ಉದ್ಯಮ ಅಭಿವೃದ್ಧಿಗೆ ಸರ್ಕಾರ ಗಮನ ಹರಿಸಲಿ

- ಶಾಸಕ ಸಿಮೆಂಟ್ ಮಂಜು ಒತ್ತಾಯ
- ಬೆಳಗೋಡು ಬೆಳೆಗಾರರ ಸಂಘದ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ



• ಪ್ರಜೋದಯ ವರದಿ

**ಸಕಲೇಶಪುರ:** ಕಾಫಿ ಉದ್ಯಮ ದೇಶದ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುವ ಕ್ಷೇತ್ರವಾಗಿದೆ. ಬೆಳೆಗಾರರ ಸಮಗ್ರ ಅಭಿವೃದ್ಧಿಗೆ ಸರ್ಕಾರ ವಿಶೇಷ ಗಮನ ಹರಿಸಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಒತ್ತಾಯಿಸಿದರು.

ತಾಲ್ಲೂಕಿನ ಬಾಳ್ಳುಪೇಟೆಯಲ್ಲಿ ಗುರುವಾರ ಬೆಳಗೋಡು ಹೋಬಳಿ ಕಾಫಿ ಬೆಳೆಗಾರರ ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ಹಾಗು ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾದ ಕಾಫಿ ಬೆಳೆಗಾರರು ಇತ್ತೀಚಿನ ವರ್ಷಗಳಲ್ಲಿ ಹವಾಮಾನ ವೈಪರೀತ್ಯ, ಕಾರ್ಮಿಕರ ಕೊರತೆ ಹಾಗು ಕಾಡು ಪ್ರಾಣಿಗಳ ಹಾವಳಿಯಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆಂದು ಹೇಳಿದರು.


» ನಾಲ್ಕನೇ ಪುಟದಲ್ಲಿ


# ಬುಡಕಟ್ಟುಗಳ ಆಯೋಗದ ಅಧ್ಯಕ್ಷ-ಸದಸ್ಯರ ಪ್ರವಾಸ

• ಪ್ರಜೋದಯ ವರದಿ

**ಹಾಸನ :** ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಎಲ್. ಮೂರ್ತಿ ಹಾಗೂ ಸದಸ್ಯರಾದ ಎಂ. ಕುಂಬಯ್ಯ, ಸುನೀಲ್ ಎಂ ಉಕ್ಕಲಿ, ಎನ್.ದಿವಾಕರ್, ಗೀತಾ ಥಾಂವಶಿ ಹಾಗೂ ಕಾರ್ಯದರ್ಶಿ ಡಾ.ಹೆಚ್.ಎಸ್.ಶಿವರಾಮು ಅವರು ಜಿಲ್ಲಾ ಪ್ರವಾಸ ಮಾಡಲಿದ್ದಾರೆ.

ಅಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ, ಪೊಲೀಸ್ ಅಧೀಕ್ಷಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಂಘ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 2.15ಕ್ಕೆ ಪತ್ರಿಕಾ ಗೋಷ್ಠಿ ನಡೆಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಮಟ್ಟದ ಎಲ್ಲಾ ಇಲಾ ಖೆಗಳ ಅಧಿಕಾರಿಗಳೊಂದಿಗೆ ಎಸ್‌ಸಿಪಿ, ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆಯನ್ನು ಜಿ. ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ನಡೆಸಲಿದ್ದಾರೆ.

## ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ: ಶಾಸಕ ಹೆಚ್.ಪಿ.ಸ್ವರೂಪ್ ಭರವಸೆ

# ನಗರದಲ್ಲಿ ಮೂಲ ಸೌಲಭ್ಯಕ್ಕೆ ಕೊರತೆಯಾಗದಂತೆ ನಿಗಾ

• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ವೇಗವಾಗಿ ಬೆಳೆಯುತ್ತಿರುವ ಬಡಾವಣೆಗಳಲ್ಲಿ ಜನರಿಗೆ ಮೂಲಭೂತ ಸೌಕರ್ಯಗಳ ಕೊರತೆ ಉಂಟಾಗದಂತೆ ನಿಗಾ ವಹಿಸಲಾಗುತ್ತಿದೆ. ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ತಿಳಿಸಿದರು.

ನಗರದ ವಾರ್ಡ್ ನಂ.29ರ ಹುಣಸಿನಕೆರೆ ಬಡಾವಣೆಯಲ್ಲಿರುವ ಶ್ರೀ ಕಾಶಿ ವಿಶ್ವನಾಥ ದೇವಾಲಯಕ್ಕೆ ಮಹಾನಗರ ಪಾಲಿಕೆಯ ಅನುದಾನದಡಿ 23 ಲ. ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುರುವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು. ಹಾಸನ ನಗರಸಭೆ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿರುವ ಹಿನ್ನಲೆಯಲ್ಲಿ ನಗರದ



ಪ್ರತಿಯೊಂದು ವಾರ್ಡ್‌ಗೂ ಸಮಾನವಾಗಿ ಅಭಿವೃದ್ಧಿ ಕಾಮಗಾರಿ ತಲುಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಸ್ವಚ್ಛತೆ ಸೇರಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು.

23 ಲಕ್ಷ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿರುವ ಈ ಅಭಿವೃದ್ಧಿ ಕಾಮಗಾರಿಗಳು ದೇವಾಲಯದ ಸೌಲಭ್ಯಗಳನ್ನು ವಿಸ್ತರಿಸುವುದರ ಜೊತೆಗೆ ಬಡಾವಣೆಯ ಅಭಿವೃದ್ಧಿಗೂ ಸಹಕಾರಿಯಾಗಲಿವೆ. ಹುಣಸಿನಕೆರೆ ಬಡಾವಣೆಯಲ್ಲಿಯೂ ಹಲವು ವರ್ಷಗಳಿಂದ ಸಾರ್ವಜನಿಕರು ಮತ್ತು ದೇವಾಲಯದ ಭಕ್ತರು ಅಭಿವೃದ್ಧಿ ಕಾಮಗಾರಿಗಳ ಬೇಡಿಕೆ ಇಟ್ಟಿದ್ದು, ಅದಕ್ಕೆ ಸ್ಪಂದಿಸಿ ಮಹಾ ನಗರಪಾಲಿಕೆ ಅನುದಾನದಡಿ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಹೇಳಿದರು.

ದೇವಾಲಯಗಳು ಕೇವಲ ಪೂಜಾ ಕೇಂದ್ರಗಳಷ್ಟೇ ಅಲ್ಲದೆ ಸಮಾಜದ ಸಂಸ್ಕೃತಿ, ಪರಂಪರೆ ಮತ್ತು ಜನರ ನಂಬಿಕೆಯ ಪ್ರತೀಕಗಳಾಗಿವೆ. ಇಂತಹ ಧಾರ್ಮಿಕ ಕೇಂದ್ರಗಳ ಅಭಿವೃದ್ಧಿಯಿಂದ ಸ್ಥಳೀಯ ಜನರಲ್ಲಿ ಆತ್ಮೀಯತೆ ಹಾಗು ಸಾಮಾಜಿಕ ಬಾಂಧವ್ಯ ಹೆಚ್ಚುತ್ತದೆ. ಕಾಶಿ ವಿಶ್ವನಾಥ ದೇವಾಲಯಕ್ಕೆ ಪ್ರತಿದಿನ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದು, ಇಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಅಗತ್ಯವಾಗಿದೆ ಎಂದರು.

23 ಲ.ರೂ.ನಲ್ಲಿ ದೇವಾಲಯ ಆವರಣ ಅಭಿವೃದ್ಧಿ, ಕಾಂಕ್ರೀಟ್ ರಸ್ತೆ, ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಹಾಗು ಇತರೆ ಅಗತ್ಯ ಸೌಲಭ್ಯಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು. ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ನಗರದ ಸಮಗ್ರ ಅಭಿವೃದ್ಧಿಗೆ ಸರ್ಕಾರದಿಂದ ಹೆಚ್ಚಿನ ಅನುದಾನ ತರಲು ಪ್ರಯತ್ನಿಸಲಾಗುತ್ತಿದೆ. ನಗರ ಮುಂದಿನ ದಿನಗಳಲ್ಲಿ ಮಾದರಿ ನಗರವಾಗಿ ರೂಪುಗೊಳ್ಳಬೇಕೆಂಬ ಉದ್ದೇಶದಿಂದ ಅಭಿವೃದ್ಧಿ ಕಾಮಗಾರಿಗಳನ್ನು ಯೋಜಿತ ರೀತಿಯಲ್ಲಿ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಹಲವು ವರ್ಷಗಳಿಂದ ದೇವಾಲಯದ ಅಭಿವೃದ್ಧಿಗೆ ಬೇಡಿಕೆ ಇಟ್ಟಿದ್ದರೂ, ಕಾಮಗಾರಿ ಕೈಗೆತ್ತಿಕೊಳ್ಳಲಾಗಿರಲಿಲ್ಲ. ಇದೀಗ ಸ್ವರೂಪ್ ಪ್ರಕಾಶ್ ಅವರು ತಂದು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿರುವುದು ಸಂತಸದ ವಿಚಾರವೆಂದು ಭಕ್ತರು, ಸ್ಥಳೀಯರು ಅಭಿಪ್ರಾಯಪಟ್ಟರು.

ಜೆಡಿಎಸ್ ಪಕ್ಷದ ಮುಖಂಡರು, ಮಹಾ ನಗರಪಾಲಿಕೆ ಸದಸ್ಯರು, ಸ್ಥಳೀಯ ಜನಪ್ರತಿನಿಧಿಗಳು, ಬಡಾವಣೆಯ ಹಿರಿಯರು ಹಾಗು ದೇವಾಲಯದ ಭಕ್ತರು ಇದ್ದರು.

# ಕ್ಯಾಂಪಸ್ ಸಂದರ್ಶನದಲ್ಲಿ ದಿಕ್ಕು ತಪ್ಪಬೇಡಿ

## ಉದ್ಯೋಗ ಮೇಳದಲ್ಲಿ ವಿದ್ಯಾರ್ಥಿಗಳಿಗೆ ಸಲಹೆ

• ಪ್ರಜೋದಯ ವರದಿ

**ಹಾಸನ:** ಯಾವುದೇ ಸಂಸ್ಥೆಯಲ್ಲಿ ಕ್ಯಾಂಪಸ್ ಸಂದರ್ಶನಕ್ಕೆ ಹಾಜರಾಗುವ ಮೊದಲು ಆ ಸಂಸ್ಥೆಯ ಕುರಿತು ಸಂಪೂರ್ಣ ಮಾಹಿತಿ ಹೊಂದಿರುವುದು ಅಗತ್ಯವಾಗಿದ್ದು, ಉದ್ಯೋಗಾಂಕ್ಷಿಗಳು ದಿಕ್ಕು ತಪ್ಪುವ ಸಾಧ್ಯತೆ ಕಡಿಮೆಯಾಗುತ್ತದೆ ಎಂದು ಎಸ್‌ಎಂಎಫ್‌ಜಿ ನಗರ ಶಾಖೆಯ ಮುಖ್ಯ ವ್ಯವಸ್ಥಾಪಕ ಚೇತನ್ ಕುಮಾರ್ ಹೇಳಿದರು.

ನಗರದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿನಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಮಾತನಾಡಿದ ಅವರು, ಕ್ಯಾಂಪಸ್ ಸಂದರ್ಶನ ನಡೆಸುವ ಸಂಸ್ಥೆಗಳ ಬಗ್ಗೆ ಪೂರ್ವ ತಿಳುವಳಿಕೆ ಇದ್ದಷ್ಟು ಸಂದರ್ಶನವನ್ನು ಆತ್ಮವಿಶ್ವಾಸದಿಂದ ಎದುರಿಸಲು ಸಾಧ್ಯವಾಗುತ್ತದೆ. ಇದರಿಂದ ಯಶಸ್ಸು ಸಾಧಿಸುವ ಅವಕಾಶವೂ ಹೆಚ್ಚುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಂಶುಪಾಲ ಡಿ.ಎಸ್.ರಾಜು ಅವರು ಮಾತನಾಡಿ, ಸರ್ಕಾರಿ ಮತ್ತು ಖಾಸಗಿ ವಲಯಗಳ ನಡುವೆ ಸಾಕಷ್ಟು ವ್ಯತ್ಯಾಸಗಳಿವೆ. ಖಾಸಗಿ ಕ್ಷೇತ್ರದಲ್ಲಿ ನಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಹೆಚ್ಚಿನ ಪರಿಶ್ರಮ ಅಗತ್ಯವಿದೆ. ಪ್ರತಿಕ್ಷಣವೂ ನಮ್ಮನ್ನು ನಾವು ನವೀಕರಿಸಿಕೊಳ್ಳುತ್ತಾ ಪರಿಶ್ರಮ ಪಟ್ಟರೆ ಮಾತ್ರ ಉನ್ನತ ಮಟ್ಟ ತಲುಪಲು ಸಾಧ್ಯವೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪದವಿ ವಿಭಾಗದ ಪ್ಲೇಸ್ಮೆಂಟ್ ಸೆಲ್ ಸಂಯೋಜಕಿ ಡಾ. ಸವಿತಾ ಅವರು ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾರ್ಥಿ ದಿಸೆಯಲ್ಲಿಯೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಿದರೆ



» ನಾಲ್ಕನೇ ಪುಟದಲ್ಲಿ


C M Y K C M Y K C M Y K C M Y K

ಸಿನಿ ಪ್ರಜಾ
E-mail : prajodayahsn@gmail.com
ಪ್ರಜೋದಯ
08 ಮೇ 2026 ಶುಕ್ರವಾರ

# ಕ್ಯೂನಲ್ಲಿ ಶಿವಣ್ಣ, ಗಣೇಶ್, ಡಾಲಿ

## ಟಾಕ್ಸಿಕ್ ಬಿಟ್ಟು 2026ರಲ್ಲಿ ರಿಲೀಸ್ ಆಗ್ತಿರೋ ಕನ್ನಡ ಸಿನಿಮಾಗಳಿವು



2026 ಕನ್ನಡ ಚಿತ್ರರಂಗದ ಮಟ್ಟಿಗೆ ಅದೃಷ್ಟದ ವರ್ಷ ಅನ್ನೋದು ಇನ್ನೂ ಸಾಬೀತಾಗಿಲ್ಲ. ಈ ಐದು ತಿಂಗಳಲ್ಲಿ ಕನ್ನಡ ಚಿತ್ರರಂಗಕ್ಕೆ ಹೇಳಿಕೊಳ್ಳುವಂತಹ ಸಿನಿಮಾಗಳು ಬಂದಿಲ್ಲ. ಆಗಾಗ ಒಂದೆರಡು ಸಿನಿಮಾಗಳು ಆವರೇಜ್ ಹಿಟ್ ಕಂಡಿವೆ. ಅದು ಬಿಟ್ಟರೆ, ದೇಶವೇ ತಿರುಗಿ ನೋಡುವಂತಹ ಒಂದೇ ಒಂದು ಸಿನಿಮಾ ಕೂಡ ಬಂದಿಲ್ಲ. ಅದಕ್ಕಾಗಿ ಕನ್ನಡ ಸಿನಿಮಾ ಪ್ರಿಯರು ಎದುರು ನೋಡುತ್ತಿದ್ದಾರೆ.

ಈ ವರ್ಷದ ಮೊದಲಾರ್ಧದಲ್ಲಿಯೇ ಯಶ್ ನಟಿಸಿರುವ ಬಹು ನಿರೀಕ್ಷೆಯ ಸಿನಿಮಾ ಟಾಕ್ಸಿಕ್ ರಿಲೀಸ್ ಆಗಬೇಕಿತ್ತು. ಆದರೆ, ಅದು ಪೋಸ್ಟ್‌ಪೋನ್ ಆಗಿದ್ದರಿಂದ ಇದ್ದ ಒಂದು ಹೋಪ್ ಕೂಡ ಮುಂದೂಡಲ್ಪಟ್ಟಿದೆ. ಕೆಡಿ ದಿ ಡೆವಿಲ್ ಮೇಲೆ ನಂಬಿಕೆ ಇಟ್ಟಿದ್ದರು. ಆದರೆ, ಆ ಸಿನಿಮಾ ಕೂಡ ಬಾಕ್ಸಾಫೀಸ್‌ನಲ್ಲಿ ಹೇಳಿಕೊಳ್ಳುವಂತಹ ಸದ್ದು ಮಾಡಿಲ್ಲ. ಹೀಗಾಗಿ ಇದ್ದ ಒಂದೇ ಒಂದು ಸಿನಿಮಾ ಕೂಡ ಕೈ ಕೊಟ್ಟಿದೆ.

ಆದರೆ, 2026ರ ಸೆಕೆಂಡ್ ಹಾಫ್‌ನಲ್ಲಿ ಕನ್ನಡ ಚಿತ್ರರಂಗದಲ್ಲಿ ಸಾಲು ಸಾಲು ಸಿನಿಮಾಗಳು ರಿಲೀಸ್ ಆಗಬೇಕಿದೆ. ಅದರಲ್ಲಿ ಗೋಲ್ಡನ್ ಸ್ಟಾರ್ ಗಣೇಶ್, ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್, ಡಾಲಿ ಧನಂಜಯ್, ವಿನಯ್ ರಾಜ್‌ಕುಮಾರ್ ಅವರ ಸಿನಿಮಾಗಳು ಸೇರಿಕೊಂಡಿವೆ. ಹಾಗಿದ್ದರೆ, 2026ರಲ್ಲಿ ಯಾವ್ಯಾವ ನಟರ ಎಷ್ಟೆಷ್ಟು ಸಿನಿಮಾಗಳು ಬಿಡುಗಡೆಗೆ ಸಜ್ಜಾಗಿವೆ ಅನ್ನೋದು ತಿಳಿಯುವುದಕ್ಕೆ ಮುಂದೆ ಓದಿ.

**ಯಶ್ ಟಾಕ್ಸಿಕ್ ಮೇಲೆ ಕಣ್ಣು:** 2026ರಲ್ಲಿ ರಿಲೀಸ್ ಆಗಲಿರುವ ಕನ್ನಡ ಸಿನಿಮಾಗಳ ಪೈಕಿ ಯಶ್ ನಟನೆಯ ಟಾಕ್ಸಿಕ್ ಟಾಪ್‌ನಲ್ಲಿದೆ. ಎಲ್ಲರ ಕಣ್ಣು ಈ ಸಿನಿಮಾ ಮೇಲಿದೆ. ಕನ್ನಡ ಚಿತ್ರರಂಗವನ್ನು ಈ ವರ್ಷ ಉಳಿಸಬಲ್ಲ ಸಿನಿಮಾ ಇದೊಂದೇನಾ? ಅದ್ಯಕ್ಕೆ ಪ್ಯಾನ್ ಇಂಡಿಯಾ ಲೆವೆಲ್‌ನಲ್ಲಿ ಸದ್ದು ಮಾಡಬಹುದಾದ ಸಿನಿಮಾ ಅಂದರೆ, ಟಾಕ್ಸಿಕ್ ಒಂದೇನೆ. ಇದು ಬಿಟ್ಟರೆ, ಮತ್ತೊಂದು ಸಿನಿಮಾ ಕಾಣಿತ್ತಿಲ್ಲ.




**ಕ್ಯೂನಲ್ಲಿ ಗಣೇಶ್, ಶಿವಣ್ಣ:** ಯಶ್ ಟಾಕ್ಸಿಕ್ ಬಿಟ್ಟರೆ, 2026ರಲ್ಲಿ ಗಣೇಶ್ ಹಾಗೂ ಶಿವಣ್ಣ ನಟನೆಯ ಸಿನಿಮಾಗಳು ರಿಲೀಸ್‌ಗೆ ಕ್ಯೂನಲ್ಲಿ ಇವೆ. ಗಣೇಶ್ ಸಿನಿಮ ಬೃಂದಾವಿಹಾರಿ ಈಗಾಗಲೇ ಪ್ರಚಾರವನ್ನು ಆರಂಭಿಸಿದೆ. ಅಂದುಕೊಂಡಂತೆ ಆದರೆ, ಆಗಸ್ಟ್ ತಿಂಗಳಿಗೂ ಮುನ್ನವೇ ಈ ಸಿನಿಮಾ ರಿಲೀಸ್ ಆದರೂ ಅಚ್ಚರಿ ಪಡಬೇಕಿಲ್ಲ. ಅಲ್ಲೆ ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ನಟಿಸುತ್ತಿರುವುದರಿಂದ ಈ ವರ್ಷ ಮುಗಿಯುವುದರೊಳಗೆ ಇನ್ನೊಂದು ರಿಲೀಸ್ ಆಗಬಹುದೆಂಬ ನಿರೀಕ್ಷೆಯಿದೆ.

ಇನ್ನು ಜೂನ್‌ನಿಂದ ಶಿವಣ್ಣ ನಟಿಸಿದ ಸಿನಿಮಾಗಳು ಒಂದರ ಹಿಂದೊಂದು ರಿಲೀಸ್ ಆಗಲಿವೆ. ಜೂನ್ 4ರಂದು ರಾಮ್ ಚರಣ್ ಜೊತೆ ನಟಿಸಿದ ಪೆದ್ದಿ ಸಿನಿಮಾ ಅದ್ದೂರಿಯಾಗಿ ರಿಲೀಸ್ ಆಗುತ್ತಿದೆ. ಇದರೊಂದಿಗೆ ರಜನಿಕಾಂತ್ ಜೊತೆ ನಟಿಸಿರುವ ಜೈಲರ್ 2 ಬಿಡುಗಡೆಯಾಗಿದೆ. ಹಾಗೇ ಅಪ್ಪಟ ಕನ್ನಡ ಸಿನಿಮಾ ಡ್ಯಾಡಿ ಇದೇ ವರ್ಷ ರಿಲೀಸ್ ಆಗಲಿದೆ. ಹಾಗೇ ಹೇಮಂತ್ ಎಂ ರಾವ್ ನಿರ್ದೇಶನ ಮಾಡುತ್ತಿರುವ 999 ಆಪರೇಷನ್ ಡ್ರೀಮ್ ಥಿಯೇಟರ್ ರಿಲೀಸ್ ಆದೂ ಅಚ್ಚರಿ ಪಡಬೇಕಿಲ್ಲ.

**ಡಾಲಿ, ವಿಜಯ್, ವಿನಯ್ ರಾಜ್‌ಕುಮಾರ್:** ಇನ್ನೂ ಡಾಲಿ ಧನಂಜಯ್ ಕೈಯಲ್ಲಿ ಹಲವು ಸಿನಿಮಾಗಳಿವೆ. ಶಿವಣ್ಣ ಜೊತೆ ನಟಿಸುತ್ತಿರುವ 999 ಆಪರೇಷನ್ ಡ್ರೀಮ್ ಥಿಯೇಟರ್ ಕೊನೆಯ ಹಂತದ ಶೂಟಿಂಗ್ ನಡೆಯುತ್ತಿದೆ. ಹಾಗೇ ಅಣ್ಣ ಫ್ರಮ್ ಮೆಕ್ಸಿಕೋದ ಪ್ರಚಾರ ಆರಂಭ ಆಗಿದೆ. ಇನ್ನೊಂದು ಅವರೇ ನಿರ್ಮಾಣ ಮಾಡುತ್ತಿರುವ ಮದರ್ ಪ್ರಾಮಿಸ್ ಸಿನಿಮಾ ಕೂಡ ರೆಡಿಯಾಗುತ್ತಿದೆ. ಈ ಸಿನಿಮಾ ಎರಡೂ ಸಿನಿಮಾ ಇದೇ ವರ್ಷ ರಿಲೀಸ್ ಆದರೂ ಆಗಬಹುದು.



ಇನ್ನು ದುನಿಯಾ ವಿಜಯ್ ನಿರ್ದೇಶನ ಮಾಡುತ್ತಿರೋ ಸಿಟಿ ಲೈಟ್ಸ್ ಮೇಲೆ ಎಲ್ಲರ ಕಣ್ಣು ಇದೆ. ಇದು ದುನಿಯಾ ವಿಜಯ್ ಅವರ ಎರಡನೇ ಪುತ್ರಿ ಮೋನಿಷಾ ವಿಜಯ್ ಕುಮಾರ್‌ಗೆ ಚೊಚ್ಚಲ ಸಿನಿಮಾ. ಇದರಲ್ಲಿ ವಿನಯ್ ರಾಜ್‌ಕುಮಾರ್ ಲೀಡ್ ರೋಲ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

**ಇವರದ್ದು ಈ ವರ್ಷ ಒಂದೂ ಸಿನಿಮಾವಿಲ್ಲ:** ಈ ವರ್ಷ ಕನ್ನಡ ಚಿತ್ರರಂಗ ಸೂಪರ್‌ಸ್ಟಾರ್‌ಗಳ ಸಿನಿಮಾಗಳು ರಿಲೀಸ್ ಆಗಿದ್ದೇ ಕಡಿಮೆ. ಇನ್ನು ಉಳಿದ ಆರು ತಿಂಗಳಲ್ಲೂ ಇವರ ಸಿನಿಮಗಳು ರಿಲೀಸ್ ಆಗುವುದಿಲ್ಲ. ಕಿಚ್ಚ ಸುದೀಪ್ ಅವರದ್ದು ಒಂದೇ ಒಂದು ಸಿನಿಮಾ ರಿಲೀಸ್ ಇಲ್ಲ. ದರ್ಶನ್ ಜೈಲಿನಲ್ಲಿದ್ದು, ಬಿಡುಗಡೆವರೆಗೂ ಸಿನಿಮಾ ಟೇಕಾಫ್ ಆಗಲ್ಲ. ಶ್ರೀಮುರಳಿ ಸಿನಿಮಾನೂ ಯಾವುದೂ ರಿಲೀಸ್ ಆಗಲ್ಲ. ಶರಣ್ ಸಿನಿಮಾಗಳಂತೂ ಸುದ್ದಿಗೇ ಇಲ್ಲ. ಇನ್ನು ಯುವರಾಜ್ ಕುಮಾರ್ ಸಿನಿಮಾ ಯಾವಾಗ ಸೆಟ್ಟೇರುತ್ತೋ ಗೊತ್ತಿಲ್ಲ. ರಿಷಬ್ ಶೆಟ್ಟಿ ತೆಲುಗು ಪ್ರಾಜೆಕ್ಟ್‌ನಲ್ಲಿ ಬ್ಯುಸಿಯಾಗಿದ್ದಾರೆ. ಹೀಗಾಗಿ ಈ ವರ್ಷ ಕೂಡ ಸ್ಯಾಂಡಲ್‌ವುಡ್‌ಗೆ ನಷ್ಟ ಆಗೋದು ಗ್ಯಾರಂಟಿ.

---

# 12 ವರ್ಷಗಳ ನಂತರ ಕನ್ನಡಕ್ಕೆ ಕಮ್ ಬ್ಯಾಕ್ ಮಾಡಿದ ಅಧ್ಯಕ್ಷ ನಾಯಕಿ

ಅಧ್ಯಕ್ಷ ಮೂಲಕ 2014ರಲ್ಲಿ ಬಣ್ಣದ ಲೋಕಕ್ಕೆ ಎಂಟ್ರಿ ಕೊಟ್ಟ ನಟಿ ಹೆಬಾ ಪಟೇಲ್. ನಂತರ 2015ರಲ್ಲಿ ತೆಲುಗಿಗೆ ಪದಾರ್ಪಣೆ ಮಾಡಿದ ಅವರು ಕುಮಾರಿ 21 ಎ ನಲ್ಲಿ ನಟಿಸಿದ್ದರು. ಎರಡು ಚಿತ್ರಗಳು ಹಿಟ್ ಆಗಿದ್ದವು. ಆದರೆ, ಹೆಬಾ ತೆಲುಗಿನಲ್ಲಿ ಹೆಚ್ಚು ಬಿಜಿಯಾದರು. ಕ್ರಮೇಣ ತಮಿಳಿನಲ್ಲೂ ನಟಿಸಿದರು. ಇದೀಗ 12 ವರ್ಷಗಳ ನಂತರ ರಾಮರಸ ಚಿತ್ರದಲ್ಲಿ ಸ್ಪೆಷಲ್ ಸಾಂಗ್‌ನಲ್ಲಿ ಹೆಜ್ಜೆ ಹಾಕುವ ಮೂಲಕ ಕನ್ನಡಕ್ಕೆ ಕಮ್‌ಬ್ಯಾಕ್ ಮಾಡಿರುವ ಹೆಬಾ, ಜತೆಗೆ ರುದ್ರ ಕಾಲ ಮೂಲಕ ನಾಯಕಿಯಾಗಿಯೂ ವಾಪಸ್ಸಾಗಿದ್ದಾರೆ. ಇತ್ತೀಚೆಗಷ್ಟೆ ವಿಜಯವಾಣಿ ಜತೆ ಮಾತಿಗೆ ಸಿಕ್ಕಿದ್ದ ಅವರು, ಅಧ್ಯಕ್ಷ ಬಳಿಕ ಬರದ ಕನ್ನಡ ಆಫರ್‌ಗಳು, ತೆಲುಗಿನ ಕುಮಾರಿ... ನಂತರ ಹೆಚ್ಚಾದವು. ಆದರೆಮ ಟಾಲಿವುಡ್‌ನಲ್ಲಿ ಹೆಚ್ಚು ಆಫರ್‌ಗಳಿದ್ದ ಕಾರಣ, ಅಲ್ಲಿಯೇ ಮುಂದುವರಿದೆ. ಆಗಿನಿಂದಲೂ ಆಗಾಗ ಕನ್ನಡದಲ್ಲೂ ಕಥೆ ಕೇಳುತ್ತಿದ್ದೆ. ಇದೀಗ ರುದ್ರ, ಕಾಲ ಕಥೆ ಇಷ್ಟವಾಗಿ, ಒಪ್ಪಿದೆ. ಫ್ಯಾಮಿಲಿ ಡ್ರಾಮಾ, ಹಾರರ್, ಹಾರರ್ ಕಾಮಿಡಿ, ಕಂಪ್ಲೀಟ್ ಕಾಮಿಡಿ... ಎಲ್ಲ ಬಗೆಯ ಚಿತ್ರಗಳಲ್ಲೂ ನಟಿಸಲು ಇಷ್ಟ. ಆದರೆ, ನನಗೆ ಕ್ರೈಮ್ ಥ್ರಿಲ್ಲರ್ ನೋಡಲು, ನಟಿಸಲು ಹೆಚ್ಚು ಇಷ್ಟ. ರುದ್ರ, ಕಾಲ ಕೂಡ ಕ್ರೈಮ್ ಥ್ರಿಲ್ಲರ್ ಆದ ಕಾರಣ ಒಪ್ಪಿದೆ. ಇದು ಕನ್ನಡ ಮತ್ತು ತೆಲುಗಿನಲ್ಲಿ ಮೂಡಿಬರಲಿದೆ ಎಂದು ಮಾಹಿತಿ ನೀಡುತ್ತಾರೆ.

**ಮುಂದಿನ ಚಿತ್ರಗಳು**

ಚಿತ್ರಗಳ ಕ್ವಾಲಿಟಿ ಮತ್ತು ಕ್ವಾಂಟಿಟಿ ಎರಡೂ ಮುಖ್ಯ ಎನ್ನುವ ಹೆಬಾ, ಕೆಲ ಚಿತ್ರಗಳು ಆತ್ಮತೃಪ್ತಿ ನೀಡುತ್ತವೆ, ಕೆಲ ಚಿತ್ರಗಳು ಹೊಟ್ಟೆ ತುಂಬಿಸುತ್ತವೆ. ಹೀಗಾಗಿ ಗುಣಮಟ್ಟದ ಚಿತ್ರಗಳೂ ಬೇಕು, ಹೆಚ್ಚು ಸಿನಿಮಾಗಳಲ್ಲೂ ನಟಿಸಬೇಕು. ಕನ್ನಡದಲ್ಲಿ ರಾಮರಸ, ರುದ್ರ ಕಾಲ ಜತೆಗೆ ತಮಿಳಿನಲ್ಲಿ ಬಾಬಿ ಸಿಂಹ ಜತೆ ಒಂದು ಸಿನಿಮಾ ಮಾಡುತ್ತಿದ್ದೇನೆ. ಜತೆಗೆ ತೆಲುಗಿನಲ್ಲೂ ಚಿತ್ರದಲ್ಲಿ ನಟಿಸುತ್ತಿದ್ದೇನೆ. ಹೀಗಾಗಿ ಈ ವರ್ಷ ವ'ುಾರ'ು



ಭಾಷೆಗಳಲ್ಲೂ ತಲಾ ಒಂದು ಸಿನಿಮಾ ಬರಲಿವೆ ಎಂದು ಹೇಳಿಕೊಳ್ಳುತ್ತಾರೆ.

**ಮರುಜೀವ ನೀಡಿದ್ದೇ ಒಟಿಟಿ!**

ಒಟಿಟಿ ಪ್ರಾಮುಖ್ಯದ ಬಗ್ಗೆ ಹೆಬಾ, 2018, 19ರಲ್ಲಿ ನನ್ನ ತೆಲುಗು ಚಿತ್ರಗಳು ಫ್ಲಾಪ್ ಆಗಿದ್ದವು. ಅವಕಾಶವಿಲ್ಲದೇ ಮನೆಯಲ್ಲಿದ್ದೆ. 2020ರಲ್ಲಿ ಒಡೆಲ ರೈಲ್ವೇ ಸ್ಟೇಷನ್ ಆಫರ್ ಬಂತು. ಮನೆಯಲ್ಲಿ ಕುಳಿತು ಏನು ಮಾಡುವುದು ಅಂತ ಅದರಲ್ಲಿ ನಟಿಸಿದೆ. ಆ ಸಿನಿಮಾ ನನಗೆ ಒಂದೊಳ್ಳೆ ಒಟಿಟಿ ಮಾರ್ಕೆಟ್ ಸೃಷ್ಟಿಸಿತು. ಕಳೆದ ಡಿಸೆಂಬರ್‌ನಲ್ಲಿ ಮತ್ತೊಂದು ಒಟಿಟಿ ಸಿನಿಮಾ ರಿಲೀಸ್ ಆಯಿತು. ಈಗ ನಾಲ್ಕೈದು ತಿಂಗಳ ಬಳಿಕವೂ ಅದು ಟ್ರೆಂಡಿಂಗ್‌ನಲ್ಲಿದೆ. ಒಟಿಟಿ ವೇದಿಕೆಗಳು ಜನರು ಮನರಂಜನೆಯನ್ನು ನೋಡುವ ರೀತಿಯನ್ನೇ ಬದಲಿಸಿವೆ ಎನ್ನುತ್ತಾರೆ.

**ವಿವಾದಗಳಿಂದ ದೂರ**

ಕಳೆದ 12 ವರ್ಷಗಳಲ್ಲಿ ಮೂರು ಚಿತ್ರರಂಗಗಳಲ್ಲಿ 25ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದರೂ, ಹೆಬಾ ವಿವಾದಗಳಿಂದ ಹಾಗೂ ರೂಮರ್‌ಗಳಿಂದ ದೂರ. ಕಲಾವಿದರಿಗೆ ನಟನೆಯೇ ಜೀವನ ಅಥವಾ ವ್ಯಕ್ತಿತ್ವವಾಗುವ ಸಾಧ್ಯತೆ ಹೆಚ್ಚು. ಹೀಗಾಗಿ ನಾನು ಸಿನಿಮಾ ಕರಿಯರ್ ಪ್ರಾರಂಭದಲ್ಲೇ ನಟನೆಯನ್ನು ವೃತ್ತಿಯಂತೆ ಮಾತ್ರ ನೋಡಲು ನಿರ್ಧರಿಸಿದ್ದೆ. ಪ್ಯಾಕಪ್ ಬಳಿಕ ನಾನು ಸಿನಿಮಾ ಬಗ್ಗೆ ಮಾತನಾಡುವುದಿಲ್ಲ. ಎಮರ್ಜೆನ್ಸಿ ಇದ್ದರಷ್ಟೇ ಅದರ ಬಗ್ಗೆ ಮಾತು. ಚಿತ್ರತಂಡದವರ ಹುಟ್ಟುಹಬ್ಬ ಅಥವಾ ತಂಡದ ಸಕ್ಸಸ್ ಆಚರಣೆ ಇದ್ದರೆ ಮಾತ್ರ ಹೋಗುತ್ತೇನೆ. ಇಲ್ಲದಿದ್ದರೆ ಚಿತ್ರರಂಗದವರ ಜತೆ ಪಾರ್ಟಿಗಳಿಗೆ ಹೋಗುವುದಿಲ್ಲ. ಚಿತ್ರರಂಗದ ಜತೆ ಒಡನಾಟವಿಲ್ಲದ ಹಳೆಯ ಶಾಲೆ, ಕಾಲೇಜು ದಿನಗಳ ಫ್ರೆಂಡ್ಸ್ ಜತೆ ಹೆಚ್ಚು ಕಾಲ ಕಳೆಯುತ್ತೇನೆ ಎನ್ನುತ್ತಾರೆ.

---

# ಕನ್ನಡದಲ್ಲಿ ಅಂಬೆಗಾಲಿಡುವ ಮುನ್ನವೇ ಹಿಂದಿಗೆ ಹಾರಿದ ಚಂದನವನದ ತಾರೆ



ಬಾಲಿವುಡ್ ಅಂಗಳದಲ್ಲಿ ಸುಶ್ಮಿತಾ ಭಟ್: ಕನ್ನಡ ಮೂಲದ ನಟಿಯರು ಹಿಂದಿ ಚಿತ್ರರಂಗದಲ್ಲಿ ಕಮಾಲ್ ಮಾಡುತ್ತಿದ್ದಾರೆ. ಈಗಾಗಲೇ ದೀಪಿಕಾ ಪಡುಕೋಣೆ, ರಶ್ಮಿಕಾ ಮಂದಣ್ಣ, ಪ್ರಿಯಾಮಣಿ, ಶ್ರೀಲೀಲಾ ಸೇರಿ ಹಲವರು ಗಮನಸೆಳೆದಿದ್ದಾರೆ. ಇದೀಗ ಮತ್ತೊಬ್ಬ ನಟಿ ಸುಶ್ಮಿತಾ ಭಟ್ ಹಿಂದಿ ಚಿತ್ರರಂಗಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ಕನ್ನಡದ ಕಾವ್ಯಾಂಜಲಿ ಧಾರಾವಾಹಿ ಮೂಲಕ ಬಣ್ಣದ ಲೋಕಕ್ಕೆ ಬಂದಿದ್ದ ಅವರು ಬಳಿಕ ಚೌ ಚೌ ಬಾತ್, ಕಲ್ಜಿಗ ಚಿತ್ರಗಳಲ್ಲಿ ನಟಿಸಿದ್ದರು. ಚಂದನವನದಲ್ಲಿ ಅಂಬೆಗಾಲಿಡುವ ಮುನ್ನವೇ ಅವರು ಮಾಲಿವುಡ್, ಟಾಲಿವುಡ್, ಕಾಲಿವುಡ್‌ನಲ್ಲಿ ನಟಿಸಿ ಸೈ ಎನಿಸಿಕೊಂಡರು.

ಇಂತಹ ಅಪರೂಪದ ಪ್ರತಿಭೆ ಇದೀಗ ಬಾಲಿವುಡ್‌ನಲ್ಲಿ ಮಿಂಚಲು ಸಿದ್ಧರಾಗುತ್ತಿದ್ದಾರೆ. ಹಾರ್ದಿಕ್ ಗಜ್ಜಾರ್ ನಿರ್ದೇಶನದ ಕೃಷ್ಣಾವತಾರಂ ಭಾಗ 1: ಹೃದಯಂ ಚಿತ್ರದಲ್ಲಿ ಸುಶ್ಮಿತಾ ರಾಧಾ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಇದೇ 7ಕ್ಕೆ ಸಿನಿಮಾ ರಿಲೀಸ್ ಆಗಲಿದೆ. ಬಾಲಿವುಡ್ ಪ್ರವೇಶಿದ ಬಗ್ಗೆ, ಎರಡು ವರ್ಷಗಳ ಹಿಂದೆ ಈ ಚಿತ್ರತಂಡವೇ ನನ್ನನ್ನು ಸಂಪರ್ಕಿಸಿತು. ಲುಕ್ ಟೆಸ್ಟ್ ನಡೆಸಿ, ಚಿತ್ರತಂಡಕ್ಕೆ ಆಯ್ಕೆ ಮಾಡಿಕೊಂಡರು. ಇಲ್ಲಿ ನನ್ನದು ರಾಧಾ ಪಾತ್ರ. ನಾವು ಈಗಾಗಲೇ ಕೇಳಿರುವ, ತಿಳಿದಿರುವ ಪೌರಾಣಿಕ ಘಟನೆಗಳನ್ನೇ ತೆಗೆದುಕೊಂಡು ರಾಧಾ ಮತ್ತು ಕೃಷ್ಣನ ನಡುವಿನ ಪ್ರೀತಿ, ಪ್ರೇಮವನ್ನು ತೋರಿಸಲಾಗಿದೆ. ಈ ಹಿಂದೆ ರಾಧಾ ಪಾತ್ರದ ಬಗ್ಗೆ ಊಹಿಸಿಕೊಂಡಿದ್ದೆ. ಆದರೆ, ಇದೀಗ ಅದನ್ನು ಪಾತ್ರದ ಮೂಲಕ ಅನುಭವಿಸಿದ್ದೇನೆ. ಇಡೀ ಪಾತ್ರ ನನ್ನನ್ನು ದೈವತ್ವಕ್ಕೆ ಕರೆದುಕೊಂಡು ಹೋಗಿತ್ತು. ದಕ್ಷಿಣ ಭಾರತದವಳಾದ ಕಾರಣ ನನಗೆ ಹಿಂದಿ ಅಷ್ಟ ಕಷ್ಟೇ. ಅದಕ್ಕಾಗಿ ಹಿಂದಿ ಟೀಚರ್ ನೇಮಿಸಿ, ಭಾಷೆ ಹೇಳಿಕೊಡಲಾಯಿತು. ಬಳಿಕ ಒಂದು ತಿಂಗಳು ಪಾತ್ರಕ್ಕಾಗಿ ವರ್ಕ್‌ಶಾಪ್ ನಡೆಸಿದವು. ರಾಧಾ ಹೇಗೆ ಲವಲವಿಕೆಯಿಂದ ಇರುತ್ತಾಳೆ. ಹಾಗೆಯೇ ಇರುವಂತೆ ಪ್ರಾಕ್ಟೀಸ್ ಮಾಡಿದೆವು. ಕೃಷ್ಣ ಪಾತ್ರಧಾರಿ ಸಿದ್ಧಾರ್ಥ್ ಗುಪ್ತ, ನಟಿ ಸಂಸ್ಕೃತಿ, ನನ್ನನ್ನು ಸೇರಿ ಬಹುತೇಕ ಕಲಾವಿದರು ಹೊಸಬರು. ಎಲ್ಲರೂ ಸೌಹಾರ್ದವಾಗಿಯೇ ನಟಿಸಿದೆವು. ಇನ್ನು ಈ ಚಿತ್ರದಲ್ಲಿ ಕನ್ನಡದ ನಟ ಜಯರಾಮ್ ಕಾರ್ತಿಕ್ (ಜೆಕೆ) ಕೂಡ ಇರುವುದು ಕನ್ನಡಿಗರ ಖುಷಿಯ ವಿಚಾರ ಎನ್ನುತ್ತಾರೆ ಸುಶ್ಮಿತಾ ಭಟ್.

**ಕಲಾವಿದರಿಗೆ ಗಡಿ ಇಲ್ಲ**

ಕಲಾವಿದರ ಹುಡುಕಾಟದಲ್ಲಿ ಬಾಲಿವುಡ್‌ನವರು ಗಡಿ ಮೀರಿದ್ದಾರೆ. ಹಾಗಾಗಿ, ದಕ್ಷಿಣದವರಿಗೆ ಅವಕಾಶಗಳು ಸಿಗುತ್ತಿವೆ ಎನ್ನುವ ಸುಶ್ಮಿತಾ, ಕಲಾವಿದರಿಗೆ ಯಾವುದೇ ಗಡಿ ಇಲ್ಲ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಕಲಾವಿದರ ವಿನಿಮಯ ಸಾಮಾನ್ಯವಾಗಿದೆ. ಇನ್ನು ಪೌರಾಣಿಕ ಸಿನಿಮಾಗಳು ಎಂದರೆ, ಬಾಲಿವುಡ್‌ನವರು ಹೆಚ್ಚು ದಕ್ಷಿಣ ಕಲಾವಿದರಿಗೆ ಆದ್ಯತೆ ನೀಡುತ್ತಾರೆ ಎಂಬುದು ನಟಿಯ ಅನಿಸಿಕೆ. ಸದ್ಯ ಸುಶ್ಮಿತಾ ಕನ್ನಡದ ಕರಾವಳಿ ಶೂಟಿಂಗ್ ಪೂರ್ಣಗೊಳಿಸಿದ್ದು, ತೆಲುಗು ಚಿತ್ರದ ಮಾತುಕತೆಯಲ್ಲಿದ್ದಾರೆ. ಪರಭಾಷೆಯಲ್ಲಿ ಮಿಂಚುತ್ತಿದ್ದರೂ, ಕನ್ನಡದಲ್ಲಿ ಅವಕಾಶಗಳು ಹೆಚ್ಚುತ್ತಿಲ್ಲ ಎಂದು ನಟಿ ಬೇಸರಿಸುತ್ತಾರೆ.

**ಪ್ರಮುಖ ಮುಖ್ಯಾಂಶಗಳು**

- ಕೃಷ್ಣಾವತಾರಂ ಭಾಗ 1 ಚಿತ್ರದಿಂದ ಹಿಂದಿ ಚಿತ್ರರಂಗದತ್ತ ಸ್ಯಾಂಡಲ್ ವುಡ್ ನಟಿ
- ಪೌರಾಣಿಕ ರಾಧಾ ಪಾತ್ರದಲ್ಲಿ ಮಿಂಚಲಿದ್ದಾರೆ ಕಲ್ಜಿಗ ತಾರೆ
- ಕನ್ನಡದಲ್ಲಿ ಅವಕಾಶ ಸಿಗದ ಬಗ್ಗೆ ಬೇಸರಿಸಿದ ನಟಿ



---

# 3 ಇಡಿಯಟ್ಸ್ ಸೀಕ್ವೆಲ್‌ನಲ್ಲಿ ಇರಲಿದ್ದಾರೆ ಈ ಬಾಲಿವುಡ್ ಖ್ಯಾತ ನಟ?

ರಾಜ್‌ಕುಮಾರ್ ಹಿರಾನಿ ನಿರ್ದೇಶಿಸಿ, ಆಮಿರ್ ಖಾನ್, ಮಾಧವನ್, ಶರ್ಮನ್ ಜೋಶಿ ಒಟ್ಟಿಗೆ ನಟಿಸಿದ್ದ ಈ ಸಿನಿಮಾ ಬ್ಲಾಕ್ ಬಸ್ಟರ್ ಆದ ಜೊತೆಗೆ ಕಲ್ಟ್ ಕ್ಲಾಸಿಕ್ ಎನಿಸಿಕೊಂಡಿದೆ. ನಾಲ್ಕು ಜನ ಗೆಳೆಯರ ಕತೆಯನ್ನು ರಾಜ್‌ಕುಮಾರ್ ಹಿರಾನಿ ಈ ಬಾರಿ ನಿರ್ದೇಶಿಸಲಿದ್ದು ಈ ಸಿನಿಮಾಕ್ಕೆ 4 ಇಡಿಯಟ್ಸ್ ಎಂದು ಹೆಸರಿಡಲಾಗುತ್ತಿದೆ ಎಂದು ವರದಿಯಾಗಿದೆ. ಈ ಚಿತ್ರದಲ್ಲಿ ಅಮೀರ್ ಖಾನ್, ಆರ್. ಮಾಧವನ್ ಮತ್ತು ಶರ್ಮನ್ ಜೋಶಿ ಅವರ ಜೊತೆ ಈ ನಟ ಇರಲಿದ್ದಾರಂತೆ.

ಅಮೀರ್ ಖಾನ್ ಅವರ ಐಕಾನಿಕ್ ಚಿತ್ರ 3 ಈಡಿಯಟ್ಸ್ ಮುಂದಿನ ಭಾಗ ಮತ್ತೆ ಬರಲಿದೆ ಎಂದು ವರದಿಯಾಗಿದೆ. ಇತ್ತೀಚೆಗೆ 3 ಇಡಿಯಟ್ಸ್ ಸಿನಿಮಾದ ಸೀಕ್ವೆಲ್ ಬಗ್ಗೆ ಚರ್ಚೆ ಜೋರಾಗಿ ನಡೆಯುತ್ತಿವೆ. ಆಮಿರ್ ಖಾನ್ ಖುದ್ದು, ತಾವು 3 ಇಡಿಯಟ್ಸ್ ಸೀಕ್ವೆಲ್ ಮಾಡುವುದಾಗಿ ಹೇಳಿದ್ದಾರೆ. ಆದರೀಗ ಹೊಸ ವರದಿಯ ಪ್ರಕಾರ ಈ ನಟ ಸಿಕ್ವೆಲ್‌ನಲ್ಲಿ ಇರಲಿದ್ದಾರಂತೆ.


**ಯಾರೆಲ್ಲ ಇದ್ದಾರೆ?**

ರಾಜ್‌ಕುಮಾರ್ ಹಿರಾನಿ ನಿರ್ದೇಶಿಸಿ, ಆಮಿರ್ ಖಾನ್, ಮಾಧವನ್, ಶರ್ಮನ್ ಜೋಶಿ ಒಟ್ಟಿಗೆ ನಟಿಸಿದ್ದ ಈ ಸಿನಿಮಾ ಬ್ಲಾಕ್ ಬಸ್ಟರ್ ಆದ ಜೊತೆಗೆ ಕಲ್ಟ್ ಕ್ಲಾಸಿಕ್ ಎನಿಸಿಕೊಂಡಿದೆ. ನಾಲ್ಕು ಜನ ಗೆಳೆಯರ ಕತೆಯನ್ನು ರಾಜ್‌ಕುಮಾರ್ ಹಿರಾನಿ ಈ ಬಾರಿ ನಿರ್ದೇಶಿಸಲಿದ್ದು ಈ ಸಿನಿಮಾಕ್ಕೆ 4 ಇಡಿಯಟ್ಸ್ ಎಂದು ಹೆಸರಿಡಲಾಗುತ್ತಿದೆ ಎಂದು ವರದಿಯಾಗಿದೆ. ಈ ಚಿತ್ರದಲ್ಲಿ ಅಮೀರ್ ಖಾನ್, ಆರ್. ಮಾಧವನ್ ಮತ್ತು ಶರ್ಮನ್ ಜೋಶಿ ಅವರ ಜೊತೆ ಈ ನಟ ಇರಲಿದ್ದಾರಂತೆ.

ವಿಕ್ಕಿ ಕೌಶಲ್ ಅವರನ್ನು ಈ ಪಾತ್ರಕ್ಕೆ ಪರಿಗಣಿಸಲಾಗಿದೆ. ಪಿಂಕ್ವಿಲ್ಲಾ ವರದಿಯ ಪ್ರಕಾರ, ಶರ್ಮಾನ್ ಜೋಶಿ ಮತ್ತು ಆರ್ ಮಾಧವನ್ ಒಳಗೊಂಡ ಮೂಲ ತಾರಾಗಣಕ್ಕೆ ವಿಕ್ಕಿ ಸೇರುವ ಸಾಧ್ಯತೆಯಿದೆ.

ಕೌಶಾಲ್ ಅವರು ಆಮಿರ್ ಖಾನ್ ಅವರೊಂದಿಗೆ ಪರದೆಯನ್ನು ಹಂಚಿಕೊಳ್ಳಲು ಮತ್ತು ಅಪಾರ ಮೌಲ್ಯವನ್ನು ಹೊಂದಿರುವ ಫ್ರಾಂಚೈಸ್‌ಗೆ ಕೊಡುಗೆ ನೀಡಲು ಉತ್ಸುಕರಾಗಿದ್ದಾರೆ ಎಂದು ಮನರಂಜನಾ ಪೋರ್ಟಲ್‌ಗೆ ಮೂಲವೊಂದು ಹಂಚಿಕೊಂಡಿದೆ.

ವಿಕ್ಕಿ, ಆಮಿರ್ ಮತ್ತು ಹಿರಾನಿ ನಡುವೆ ಈಗಾಗಲೇ ಹಲವು ಚರ್ಚೆ ನಡೆದಿವೆ, ಮತ್ತು ವಿಕ್ಕಿ ಕೂಡ ಒಪ್ಪಿಕೊಂಡಿದ್ದಾರೆ ಎಂದು ವರದಿಯಾಗಿದೆ.




ಮೂಲ ಚಿತ್ರವನ್ನು ನಿರ್ದೇಶಿಸಿದ ರಾಜ್ ಕುಮಾರ್ ಹಿರಾನಿ ಅವರೇ ಈ ಉತ್ತರಭಾಗವನ್ನು ಮತ್ತೊಮ್ಮೆ ನಿರ್ದೇಶಿಸುವ ನಿರೀಕ್ಷೆಯಿದೆ.

ವರದಿಯ ಪ್ರಕಾರ, ವಿಕ್ಕಿ ಕೌಶಲ್ ಅವರು ಮಹಾವತಾರ್ ಸೇರಿದಂತೆ ತಮ್ಮ ಪ್ರಸ್ತುತ ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಿದ ನಂತರವೇ ಮುಂದಿನ ಭಾಗದ ಚಿತ್ರೀಕರಣವನ್ನು ಪ್ರಾರಂಭಿಸುತ್ತಾರೆ ಎನ್ನಲಾಗಿದೆ.



ವಿಕ್ಕಿ ಕೊನೆಯ ಬಾರಿಗೆ 2025 ರ ಐತಿಹಾಸಿಕ ಆಕ್ಷನ್ ಚಿತ್ರ ಛಾವಾದಲ್ಲಿ ಕಾಣಿಸಿಕೊಂಡರು, ಇದು ವರ್ಷದ ಅತಿದೊಡ್ಡ ಹಿಟ್‌ಗಳಲ್ಲಿ ಒಂದಾಯಿತು. ಅವರು ಪ್ರಸ್ತುತ ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ ಮತ್ತು ರಣಬೀರ್ ಕಪೂರ್ ಮತ್ತು ಆಲಿಯಾ ಭಟ್ ಅವರೊಂದಿಗೆ ನಟಿಸಿರುವ ಲವ್ ವಾರ್ ಚಿತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ.

ಈ ಚಿತ್ರವು ಬಾಲಿವುಡ್‌ನಲ್ಲಿ ಅತ್ಯಂತ ನಿರೀಕ್ಷಿತ ಯೋಜನೆಗಳಲ್ಲಿ ಒಂದಾಗಿದ'ು, ಪ್ರಸ್ತುತ ನಿರ್ಮಾಣ ಹಂತದಲ್ಲಿದೆ.

---

# ನೀನೇ ಬೇಕು ಅಮ್ಮ ಹಾಡು ಬರೆದ ನಟ ಡಾಲಿ ಧನಂಜಯ

ಡಾಲಿ ಧನಂಜಯ ನಟಿಸಿ, ನಿರ್ಮಿಸಿರುವ ಮದರ್ ಪ್ರಾಮಿಸ್ ಚಿತ್ರದ ನೀನೇ ಬೇಕು ಅಮ್ಮ ಎಂಬ ಹಾಡಿನ ಕುರಿತು ಪೋಸ್ಟ್ ಒಂದನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

ಈ ಬಗ್ಗೆ ಇನ್ಸಾಗ್ರಾಮ್‌ನಲ್ಲಿ ಪೋಸ್ಟ್ ಶೇರ್ ಮಾಡಿಕೊಂಡ ಅವರು, ಈ ಸಿನಿಮಾದ ಅಮ್ಮನ ಬಗ್ಗೆ ಹಾಡು ನೀನೆ ಬರೆಯಬೇಕು ಪೂರ್ಣ ಹೇಳಿದ್ದರು. ಟಗರುಪಲ್ಯ ನಂತರ ಹಾಡು ಬರೆಯೋಕೆ ಆಗಿರಲಿಲ್ಲ. ಮನಸ್ಸು ಸೃಜನಾತ್ಮಕ ಬರವಣಿಗೆಯಿಂದ ದೂರಾಗಿ ನಿರ್ಮಾಣ, ವ್ಯವಹಾರಗಳಲ್ಲಿ, ಬದುಕಿನ ಗೋಜಲುಗಳಲ್ಲಿ, ಬೇರೆ ಖುಷಿಗಳಲ್ಲಿ ಕಳೆದು ಹೋಗಿತ್ತು. ಮತ್ತೆ ಬರೆಯೋಕೆ ಆಗುತ್ತಾ.? ಅನ್ನುವ ಆಲೋಚನೆಯಲ್ಲೇ ಆರಂಭಿಸಿದೆ. ಸರಳವಾಗಿ ಏನೋ ಬರೆಯುವ ಪ್ರಯತ್ನ ಮಾಡಿದ್ದೇನೆ. ತಾಯಿ ಬಗ್ಗೆ ಏನೇ ಬರೆದರೂ, ಎಷ್ಟು ಬರೆದರೂ ಕಡಿಮೆ ಎಂದಿದ್ದಾರೆ.



ಮೇ 10ರಂದು ವಿಶ್ವ ತಾಯಂದಿರ ದಿನದಂದು ಮದರ್ ಪ್ರಾಮಿಸ್ ಚಿತ್ರದ ನೀನೇ ಬೇಕು ಅಮ್ಮ ಹಾಡು ಬಿಡುಗಡೆಯಾಗಲಿದೆ ಎಂದು ತಿಳಿಸಿದ್ದಾರೆ.

ಡಾಲಿ ಅವರು ಬರೆದ ಈ ಹಾಡಿನ ಸಾಹಿತ್ಯ ಹೀಗಿದೆ...

ಹೇ ಮಮತೆಯ ಬಳ್ಳಿ ಸಿರಿತನವೆಲ್ಲಿ ನೀನು ಇರದೆ..
ಹೇ ಮೆರಗಿನ ಬೆಳ್ಳಿ ಬಡತನವಿಲ್ಲಿ ನೀನು ಇರದೆ..
ಯಾವ ಪದವಿಗಳು ಪದಕಗಳೂ ಬೇಕಿಲ್ಲ ನೀನು ಬೇಕು
ಅಮ್ಮ ಯಾವ ಹಿರಿಗರಿಮೆ ಅರಸೊತ್ತಿಗೆ ಬೇಕಿಲ್ಲ
ನೀನೇ ಬೇಕು ಅಮ್ಮ.. ಎಂದು ಹಾಡು ಮುಂದುವರೆಯುವುದು..

ಸದ್ಯ, ಈ ಹಾಡಿನ ಸಾಹಿತ್ಯಕ್ಕೆ ಪ್ರೇಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪೂರ್ಣಚಂದ್ರ ಅವರ ನಿರ್ದೇಶನದ ಈ ಚೊಚ್ಚಲ ಚಿತ್ರವು ಡಾಲಿ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿದೆ. ಮದರ್ ಪ್ರಾಮಿಸ್ ಚಿತ್ರದಲ್ಲಿ ನಾಗಭೂಷಣ, ವಿನಯಾ ಪ್ರಕಾಶ್, ಗುರುದತ್ ಜೊತೆಗೆ ಅನೇಕ ಹಾಸ್ಯ ನಟರು ನಟಿಸಿದ್ದಾರೆ.

# ಬಿಹಾರ ಸಚಿವ ಸಂಪುಟ ವಿಸ್ತರಣೆ

## ನಿತೀಶ್ ಪುತ್ರ ನಿಶಾಂತ್ ಸೇರಿ 31 ನೂತನ ಸಚಿವರ ಪ್ರಮಾಣ ವಚನ

• ಪ್ರಜೋದಯ ವರದಿ

**ಪಾಟ್ನಾ:** ಬಿಹಾರದ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ತಮ್ಮ ಸಚಿವ ಸಂಪುಟ ವಿಸ್ತರಣೆ ಮಾಡಿದ್ದು ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಸೇರಿ ಜೆಡಿಯು-ಬಿಜೆಪಿ ನೇತೃತ್ವದ ಮೈತ್ರಿಕೂಟದ 31 ಶಾಸಕರು ನೂತನ ಸಚಿವರಾಗಿ ಇಂದು ಪಮಾಣವಚನ ಸ್ವೀಕರಿಸಿದರು.



ಪಾಟ್ನಾದ ಗಾಂಧಿ ಮೈದಾನದಲ್ಲಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಅಧ್ಯಕ್ಷ ನಿತಿನ್ ನಬೀನ್, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ಜೆಪಿ ನಡ್ಡಾ, ಜಿತಿನ್ ರಾಮ್ ಮಾಂಝಿ, ಮುಖ್ಯಮಂತ್ರಿ ಸಮ್ರಾಟ್ ಚೌಧರಿ, ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೇರಿ ಎನ್‌ಡಿಎ ಮಿತ್ರ ಪಕ್ಷಗಳ ನಾಯಕರು ಸಾಕ್ಷಿಯಾದರು.

ರಾಜ್ಯಪಾಲ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅತಾ ಹಸ್ನೈನ್ ನೂತನ ಸಚಿವರಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣವವನ ಬೋಧಿಸಿದರು, ಇತ್ತೀಚೆಗಷ್ಟೇ ರಾಜಕೀಯಕ್ಕೆ ಸೇರಿದ್ದ ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಅವರಿಗೆ ಸಚಿವ ಸಂಪುಟಲ್ಲಿ ಸ್ಥಾನ ದೊರೆತಿದೆ.

ಸಚಿವರಾಗಿ ವಿಜಯ್ ಕುಮಾರ್ ಸಿನ್ಹಾ, ದಿಲೀಪ್ ಕುಮಾರ್ ಜೈಸ್ವಾಲ್, ನಿಶಾಂತ್ ಕುಮಾರ್, ಲೇಶಿ ಸಿಂಗ್, ಭಗವಾನ್ ಸಿಂಗ್ ಕುಶ್ವಾಹ, ಅರುಣ್ ಶಂಕರ್ ಪ್ರಸಾದ್, ಮದನ್ ಸಾಹ್ನಿ, ಸಂತೋಷ್ ಕುಮಾರ್ ಸುಮನ್, ರಾಮ ನಿಶಾದ್, ರಾಮ್ ಕೃಪಾಲ್ ಯಾದವ್, ನಿತೀಶ್ ಮಿಶ್ರಾ, ದಾಮೋದರ್ ರಾವತ್, ಸಂಜಯ್ ಸಿಂಗ್ (ಟೈಗರ್) ಮತ್ತು ಅಶೋಕ್ ಚೌಧರಿ ಪ್ರಮಾಣ ವಚನ ಸ್ವೀಕಾರ ಮಾಡಿದರು.

ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್, ಬಿಜೆಪಿ, ಜೆಡಿಯು, ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರ ಲೋಕ ಜನಶಕ್ತಿ ಪಕ್ಷ ರಾಮ್ ವಿಲಾಸ್ ಮತ್ತು ಕೇಂದ್ರ ಸಚಿವ ಜಿತನ್ ರಾಮ್ ಮಾಂಝಿ ನೇತೃತ್ವದ ಹಿಂದೂಸ್ತಾನಿ ಅವಾಮ್ ಮೋರ್ಚಾ ಜಾತ್ಯತೀತ ಪಕ್ಷದ ಒಟ್ಟು 31 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದರು.


ಪಿಎಂ ರೋಡ್ ಶೋ

ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೂ ಮುನ್ನ ಪಾಟ್ನಾಕ್ಕೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ವಿಮಾನ ನಿಲ್ದಾಣದಿಂದ ಕಾರ್ಯಕ್ರಮ ನಡೆಯುವ ಸ್ಥಳದ ವರೆಗೆ ಬೃಹತ್ ರೋಡ್ ಶೋ ನಡೆಸಿದರು. ಈ ವೇಳೆ ರಸ್ತೆಯ ಎರಡೂ ಕಡೆ ಬಿಜೆಪಿ-ಜೆಡಿಯು ಕಾರ್ಯಕರ್ತರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅದ್ದೂರಿ ಸ್ವಾಗತ ಕೋರಿದರು.

ಇತ್ತೀಚೆಗೆ ನಡೆದ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಭಾರಿ ಗೆಲುವು ಸಾಧಿಸಿದ ಹಿನ್ನಲೆಯಲ್ಲಿ ಬಿಹಾರದ ಮುಖ್ಯಮಂತ್ರಿ ಸಮ್ರಾಟ್ ಚೌಧರಿ ಸಚಿವ ಸಂಪುಟ ವಿಸ್ತರಣೆಗೆ ಅನುವು ಮಾಡಿಕೊಡಲಾಗಿದೆ.

ಬಿಹಾರದಲ್ಲಿ ಕಳೆದ 21 ವರ್ಷಗಳಿಂದ ಮುಖ್ಯಮಂತ್ರಿಯಾಗಿ ಅಧಿಕಾದ ನಿರ್ವಹಿಸಿದ ಜೆಡಿಯು ನಾಯಕ ನಿತೀಶ್ ಕುಮಾರ್, ಅವರು ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದ ಹಿನ್ನಲೆಯಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಬಿಹಾರದಲ್ಲಿ ಬಿಜೆಪಿ-ಜೆಡಿಯು ಮೈತ್ರಿ ಸರ್ಕಾರ ಇರುವ ಹಿನ್ನಲೆಯಲ್ಲಿ ಉಪ ಮುಖ್ಯಮಂತ್ರಿಯಾಗಿದ್ದ ಸಮ್ರಾಟ್ ಚೌಧರಿ ಅವರನ್ನು ಮುಖ್ಯಮಂತ್ರಿಯಾಗಿ ಕಳೆದ ತಿಂಗಳು ಪ್ರಮಾಣ ವಚನ ಸ್ವೀಕಾರ ಮಾಡಿದ್ದರು.



## ಇಂದು ಬೂವನಹಳ್ಳಿಗೆ ಹೆಚ್.ಡಿ.ಕುಮಾರಸ್ವಾಮಿ



**ಹಾಸನ:** ಬೂವನಹಳ್ಳಿ ಗ್ರಾಮದಲ್ಲಿ ಶುಕ್ರವಾರದಿಂದ ಆರಂಭವಾಗಲಿರುವ ಶ್ರೀ ದೇವಿರಮ್ಮ ಜಾತ್ರಾ ಮಹೋತ್ಸದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರ ಸ್ವಾಮಿ ಅವರು ಭಾಗವಹಿಸಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಪೂಜಾ ಕಾರ್ಯದಲ್ಲಿ ಪಾಲ್ಗೊಂಡು ವಿಶೇಷ ಪ್ರಾರ್ಥನೆ ಸಲ್ಲಿಸಲಿದ್ದರೆ.

ಮೊದಲ ದಿನ ಉತ್ಸವದಲ್ಲಿ ಬೆಳಿಗ್ಗೆ 9 ಗಂಟೆಗೆ ಪ್ರತಿಷ್ಠಾಪನೆ, ದೇವಿರಮ್ಮ ದೇವಿಗೆ ಸಹಸ್ರ ನಾಮ ಪೂಜೆಯೊಂದಿಗೆ ಸಂಜೆ 4 ಗಂಟೆಗೆ ದೇವಿಯ ರಥಾರೋಹಣ ಕಾರ್ಯ ನೆರವೇರ ಲಿದೆ. ಸಂಜೆ 7 ರಿಂದ ರಾತ್ರಿ 12ರವರೆಗೆ ವಿವಿಧ ಧಾರ್ಮಿಕ ಸೇವೆಗಳು ಹಾಗು ಮನರಂಜನಾ ಕಾರ್ಯಕ್ರಮ ನಡೆಯಲಿವೆ.

## ಇಂದು ಸಾಮಾನ್ಯ ಸಭೆ

**ಹಾಸನ:** ಜಿಲ್ಲಾ ಪಂಚಾಯತಿ ಯೋಜನಾಧಿಕಾರಿ ಹಾಗೂ ತಾಲ್ಲೂಕು ಪಂಚಾ ಯಿತಿ ಆಡಳಿತಾಧಿಕಾರಿ ಎನ್. ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಮೇ 8 ರಂದು ಬೆಳಿಗ್ಗೆ 10.30ಕ್ಕೆ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಸಾಮಾನ್ಯ ಸಭೆಯನ್ನು ಏರ್ಪಡಿಸಲಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

## ರಾಜ್ಯ ಕಾಂಗ್ರೆಸ್ ಗೊಂದಲವನ್ನು ಹೈಕಮಾಂಡ್ ಶೀಘ್ರ ಬಗೆಹರಿಸಲಿ: ರಾಜಣ್ಣ ಒತ್ತಾಯ

• ಪ್ರಜೋದಯ ವರದಿ



**ಮೈಸೂರು:** ಮುಖ್ಯಮಂತ್ರಿ ಬದಲಾವಣೆ ಇಲ್ಲವೇ ಸಂಪುಟ ಪುನರ್‌ರಚನೆ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಆದಷ್ಟು ಬೇಗ ನಿರ್ಣಯ ಕೈಗೊಳ್ಳಬೇಕು. ತಡವಾದಷ್ಟು ಪಕ್ಷ ಹಾಗೂ ಸರ್ಕಾರ ಎರಡರ ಮೇಲೂ ದುಷ್ಪರಿಣಾಮ ಬೀರುತ್ತದೆಂದು ಶಾಸಕ ಕೆ.ಎನ್. ರಾಜಣ್ಣ ಅವರು ಒತ್ತಾಯಿಸಿದರು.

ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಹೈಕಮಾಂಡ್ ಮುಖ್ಯಮಂತ್ರಿಗೆ ಸಂಪುಟ ಪುನರ್ ರಚನೆಗೆ ಮುಕ್ತ ಅವಕಾಶ ನೀಡಬೇಕು. ಇಲ್ಲವೇ, ನಾಯಕತ್ವ ಬದಲಾವಣೆ ಮಾಡುವುದಿದ್ದರೆ ಕೂಡಲೇ ನಿರ್ಣಯ ಮಾಡಬೇಕು. ಬರೀ ಗೊಂದಲವೇ ಇದ್ದರೆ ಅದು ಎಲ್ಲಾ ರೀತಿಯ ಸಮಸ್ಯೆಗೆ ಕಾರಣವಾಗುತ್ತದೆ ಎಂದರು.

ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಆಗಬೇಕೆಂಬ ಆಸೆ ಇರುವುದು ಸಹಜ. ನಮ್ಮಲ್ಲಿ ಖರ್ಗೆ, ಪರಮೇಶ್ವರ್, ಎಂ.ಬಿ.ಪಾಟೀಲ, ಎಚ್.ಕೆ.ಪಾಟೀಲ ಸೇರಿ ಮುಖ್ಯಮಂತ್ರಿ ಆಗುವ ಅರ್ಹತೆ ಇದ್ದವರು ಒಂದು ಡಜನ್ ಮಂದಿ ಇದ್ದಾರೆ. ಡಿಕೆಶಿ ಕೆಪಿಸಿಸಿ ಅಧ್ಯಕ್ಷರಾದ್ದರಿಂದ ಅವರು ಹೆಚ್ಚು ಆಸೆ ಪಡುವುದು ತಪ್ಪೇನಿಲ್ಲ ಎಂದರು.


ಸಿದ್ದರಾಮಯ್ಯರ ಬದಲಾವಣೆಯನ್ನು ತಡೆದುಕೊಳ್ಳುವ ಶಕ್ತಿ ಕಾಂಗ್ರೆಸ್‌ಗೆ ಇದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ ನಮ್ಮದು ರಾಷ್ಟ್ರೀಯ ಪಕ್ಷ. ಹೈಕಮಾಂಡ್ ಇದೆಲ್ಲವನ್ನೂ ನೋಡಿಯೇ ಜಾಗ್ರತೆಯಿಂದ ನಿರ್ಣಯ ಕೈಗೊಳ್ಳಬೇಕು ಎಂದರು.

**ಕುತೂಹಲ ಮೂಡಿಸಿದ ಭೇಟಿ**

ಮಧುಗಿರಿ ಶಾಸಕ ಕೆ.ಎನ್. ರಾಜಣ್ಣ ಗುರುವಾರ ಇಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಭೇಟಿ ನೀಡಿ ಚರ್ಚಿಸಿದರು. ನಾಯಕತ್ವ ಬದಲಾವಣೆಯ ಚರ್ಚೆಯ ಹೊತ್ತಿನಲ್ಲಿ ಈ ಭೇಟಿ ಕುತೂಹಲ ಮೂಡಿಸಿದೆ. ಬೆಳಿಗ್ಗೆ 9.30ರ ಸುಮಾರಿಗೆ ಭೇಟಿ ನೀಡಿದ ಅವರು ಅರ್ಧ ಗಂಟೆಗೂ ಹೆಚ್ಚು ಕಾಲ ಅವರೊಂದಿಗೆ ಗುಪ್ತವಾಗಿ ಚರ್ಚಿಸಿದರು. ಬಳಿಕ ಅಲ್ಲಿಂದ ನಿರ್ಗಮಿಸಿದರು. ಖಾಸಗಿ ಕಾರ್ಯಕ್ರಮದ ನಿಮಿತ್ತ ಮೈಸೂರಿಗೆ ಬಂದಿದ್ದಾಗಿ ರಾಜಣ್ಣ ತಿಳಿಸಿದರು.

## ಮಾರ್ಷ್ ಶತಕ: ಪಂದ್ಯಕ್ಕೆ ಮಳೆ ಅಡ್ಡಿ

• ಪ್ರಜೋದಯ ವರದಿ



**ಲಖನೌ:** 49 ಎಸೆತಗಳಲ್ಲಿ ಶತಕ ಗಳಿಸಿದ ಮಿಚೆಲ್ ಮಾರ್ಷ್ ಅಮೋಘ ಬ್ಯಾಟಿಂಗ್ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ಬೃಹತ್ ಮೊತ್ತದತ್ತ ಮನ್ನಡೆದಿದೆ.

ಲಖನೌ 14 ಓವರ್‌ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ 145 ರನ್ ಗಳಿಸಿದೆ. ಮಾರ್ಷ್ 49 ಎಸೆತಗಳಲ್ಲಿ ಅಜೇಯ ಶತಕ ಗಳಿಸಿ ಅಬ್ಬರಿಸಿದ್ದಾರೆ. ಇದು ಐಪಿಎಲ್‌ನಲ್ಲಿ ಮಾರ್ಷ್ ಬ್ಯಾಟ್‌ನಿಂದ ಸಿಡಿದ 2ನೇ ಶತಕವಾಗಿದೆ. ಮಾರ್ಷ್ ಇನಿಂಗ್ಸ್‌ನಲ್ಲಿ ತಲಾ ಒಂಬತ್ತು ಸಿಕ್ಸರ್ ಹಾಗೂ ಬೌಂಡರಿಗಳು ಸೇರಿದ್ದವು.

ಟಾಸ್ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ರಜತ್ ಪಾಟೀದಾರ್ ಮೊದಲು ಫೀಲ್ಡಿಂಗ್ ಆಯ್ದುಕೊಂಡರು. ಆದರೆ ಆರ್‌ಸಿಬಿ ನಾಯಕನ ನಿರ್ಧಾರ ಸರಿಯೆನಿಸಲಿಲ್ಲ. ಆರಂಭದಲ್ಲೇ ಅರ್ಷಿನ್ ಕುಲಕರ್ಣಿ (17) ವಿಕೆಟ್ ಪತನವಾದರೂ ಲಖನೌ ಲಂಡಕ್ಕೆ ಮಿಚೆಲ್ ಮಾರ್ಷ್ ಆಸರೆಯಾದರು. ಅದರಿಂದಾಗಿ ಆರ್‌ಸಿಬಿ ತಂಡವು ಒತ್ತಡಕ್ಕೊಳಗಾಯಿತು. ಆರ್‌ಸಿಬಿ ಬೌಲರ್‌ಗಳನ್ನು ನಿರಂತಕವಾಗಿ ಎದುರಿಸಿದ ಮಾರ್ಷ್ ತಂಡವನ್ನು ಬೃಹತ್ ಮೊತ್ತದತ್ತ ಮುನ್ನಡೆಸಿದ್ದಾರೆ.

ಮಾರ್ಷ್ ಕೇವಲ 20 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಅಲ್ಲಿಂದ ಬಳಿಕವೂ ಆರ್‌ಸಿಬಿ ಬೌಲರ್‌ಗಳನ್ನು ಬೆವರಿಳಿಸಿದರು. ಈ ಮಧ್ಯೆ ಮಳೆಯಿಂದಾಗಿ ಪಂದ್ಯಕ್ಕೆ ಅಡಚಣೆ ಉಂಟಾಯಿತು.

## ಕಾಫಿ ಉದ್ಯಮ ಅಭಿವೃದ್ಧಿಗೆ ಸರ್ಕಾರ ಗಮನ ಹರಿಸಲಿ

» ಮೊದಲನೇ ಪುಟದಿಂದ

ಇಂದಿನ ಯುವ ಜನರು ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಗಳತ್ತ ಮುಖ ಮಾಡುತ್ತಿರುವುದರಿಂದ ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ ಕುಸಿಯುತ್ತಿರುವುದು ಆತಂಕಕಾರಿ ಬೆಳವಣಿಗೆ. ಕಾಫಿ ಕ್ಷೇತ್ರವೇ ಹಲವು ಕುಟುಂಬಗಳ ಜೀವನಾಡಿಯಾಗಿರುವುದರಿಂದ ತೋಟಗಳ ನಿರ್ವಹಣೆಗೆ ಕಾರ್ಮಿಕರ ಲಭ್ಯತೆ ಹೆಚ್ಚಿಸುವ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಅಕ್ರಮ ವಲಸಿಗರ ಹಾವಳಿಯಿಂದ ಬೆಳಗಾರರ ಜೀವ ಭದ್ರತೆಗೆ ಧಕ್ಕೆಯುಂಟಾಗುತ್ತಿರುವುದನ್ನೂ ಅವರು ಉಲ್ಲೇಖಿಸಿ, ಈ ಸಮಸ್ಯೆಯನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಅಗತ್ಯವಿದೆ ಎಂದರು.

ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಯುದ್ಧಗಳು ಭಾರತಕ್ಕೆ ನೇರವಾಗಿ ದೊಡ್ಡ ಮಟ್ಟದ ಪರಿಣಾಮ ಬೀರುವ ಮಟ್ಟಿಗೆ ಇಲ್ಲದಿದ್ದರೂ, ಎಲ್‌ಪಿಜಿ ಸೇರಿ ಕೆಲವು ಇಂಧನಗಳ ಬೆಲೆ ಏರಿಕೆಯಿಂದ ಪರೋಕ್ಷವಾಗಿ ತೊಂದರೆಗಳು ಉಂಟಾಗಿವೆ. ಈ ಹಿನ್ನಲೆ ದೇಶವು ಸ್ವಾವಲಂಬನೆಯತ್ತ ಹೆಜ್ಜೆ ಇಡುವ ಅಗತ್ಯವಿದೆ. ಬೇರೆ ದೇಶಗಳ ಮೇಲೆ ಅವಲಂಬನೆ ಕಡಿಮೆ ಮಾಡಿ, ಸ್ಥಳೀಯ ಸಂಪನ್ಮೂಲಗಳನ್ನು ಪರಿಣಾಮಕಾರಿ ರೀತಿಯಲ್ಲಿ ಬಳಸಿಕೊಳ್ಳುವುದು ಕಾಲದ ಅಗತ್ಯ. ಇದರಿಂದ ಭವಿಷ್ಯದ ಪೀಳಿಗೆಗೆ ಸ್ಥಿರತೆ ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು.

> **ನಾನು ಶಾಸಕನಾದ ನಂತರ ಕ್ಷೇತ್ರದ ಬೆಳಗಾರರು ಹಾಗು ರೈತರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇನೆ. ಮುಂದಿನ ದಿನಗಳಲ್ಲಿಯೂ ಬೆಳಗಾರರ ಧ್ವನಿಯಾಗಿ ನಿಲ್ಲುತ್ತೇನೆ.**
> **-ಸಿಮೆಂಟ್ ಮಂಜು, ಶಾಸಕ**

ಬೆಳಗೋಡು ಹೋಬಳಿ ಬೆಳೆಗಾರರ ಸಂಘದ ಅಧ್ಯಕ್ಷ ರಾಮಕೃಷ್ಣ, ಉಪಾಧ್ಯಕ್ಷ ದೇವರಾಜ್, ಕಾರ್ಯದರ್ಶಿ ಹೆಗ್ಗೋವೆ ಪುಟ್ಟರಾಜ್, ಸಹ ಕಾರ್ಯದರ್ಶಿ ವಿಶ್ವನಾಥ್, ಹೆಚ್.ಡಿ.ಪಿ.ಎ ಅಧ್ಯಕ್ಷ ಪರಮೇಶ್, ಜಿಲ್ಲಾ ಬೆಳೆಗಾರರ ಸಂಘದ ಕಾರ್ಯದರ್ಶಿ ಲೋಹಿತ್ ಕೌಡಳ್ಳಿ, ಕರ್ನಾಟಕ ಬೆಳೆಗಾರರ ಸಂಘದ ಉಪಾಧ್ಯಕ್ಷ ಬೆಕ್ಕನಹಳ್ಳಿ ನಾಗರಾಜ್, ಕರ್ನಾಟಕ ಬೆಳೆಗಾರರ ಸಂಘದ ಕಾರ್ಯದರ್ಶಿ ಟಿ.ಪಿ ಸುರೇಂದ್ರ, ಸೆವೆನ್ ಬೀನ್ಸ್ ಚೆರ್ಮನ್ ಧರ್ಮರಾಜ್, ಮಾಜಿ ಅಧ್ಯಕ್ಷ ಕೆ.ಎಲ್.ಮಂಜೇಗೌಡ, ಕಾಫಿ ಬೋರ್ಡ್ ಉಪ ನಿರ್ದೇಶಕ ಶಕ್ತಿ, ಹಿರಿಯ ಸಂಪರ್ಕ ಅಧಿಕಾರಿ ಡಾ. ರಂಜಿತ್ ಉಪಸ್ಥಿತರಿದ್ದರು.

## ತಂಬಾಕು ತುಂಬಿದ್ದ ಟ್ರ್ಯಾಕ್ಟರ್ ಟ್ರ್ಯಾಲಿ ಪಲ್ಟಿ

• ಪ್ರಜೋದಯ ವರದಿ



**ರಾಮನಾಥಪುರ:** ತಂಬಾಕನ್ನು ಮಾರುಕಟ್ಟೆಗೆ ಸಾಗಿಸುತ್ತಿದ್ದ ವೇಳೆ ಟ್ರ್ಯಾಕ್ಟರ್ ಟ್ರ್ಯಾಲಿಯ ನಟ್ ಕಳಚಿಕೊಂಡ ಪರಿಣಾಮ ಟ್ರ್ಯಾಕ್ಟರ್ ಮಗುಚಿ ಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ.

ಪಟ್ಟಣದ ಬಸವೇಶ್ವರ ವೃತ್ತ ಸಮೀಪ ನೆರಳೆ ಗ್ರಾಮದ ರೈತರು ತಂಬಾಕು ತುಂಬಿದ ಟ್ರ್ಯಾಕ್ಟರ್ ಮೂಲಕ ಶ್ರೀ ಸುಬ್ರಹ್ಮಣ್ಯ ನಗರದಲ್ಲಿರುವ ತಂಬಾಕು ಹರಾಜು ಮಾರುಕಟ್ಟೆಗೆ ತೆರಳುತ್ತಿದ್ದ ವೇಳೆ ಟ್ರ್ಯಾಲಿಯ ನಟ್ ಏಕಾಏಕಿ ಕಳಚಿಕೊಂಡು ಅವಘಡ ಸಂಭವಿಸಿದೆ. ಘಟನೆ ನಡೆದ ಸಮಯದಲ್ಲಿ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಿದ್ದರೂ ಅನಾಹುತ ಸಂಭವಿಸಿಲ್ಲ.ಅವಘಡದ ಪರಿಣಾಮ ಕೆಲಕಾಲ ವಾಹನ ಸಂಚಾರದಲ್ಲಿ ಅಸ್ತವ್ಯಸ್ತ ಉಂಟಾಗಿತ್ತು.

ರಾಮನಾಥಪುರ ಪಟ್ಟಣವು ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಿದ್ದು ಜನಸಂಖ್ಯೆಯೂ ಹೆಚ್ಚುತ್ತಿದೆ. ಕೇರಳ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ, ಮೈಸೂರು, ಪಿರಿಯಪಟ್ಟಣ ಹಾಗು ಹಾಸನ ಭಾಗಗಳನ್ನು ಸಂಪರ್ಕಿಸುವ ಪ್ರಮುಖ ಮಾರ್ಗವಾಗಿರುವುದರಿಂದ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತಿವೆ.

ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಡಿವೈಡರ್, ಪಾದಚಾರಿ ಮಾರ್ಗ ಹಾಗು ವೈಜ್ಞಾನಿಕ ಚರಂಡಿ ವ್ಯವಸ್ಥೆಯ ಕೊರತೆಯಿಂದ ಸಾರ್ವಜನಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಬಸವೇಶ್ವರ ವೃತ್ತದಿಂದ ರಾಜ್ಯ ಹೆದ್ದಾರಿ ಮಾರ್ಗದವರೆಗೆ ರಸ್ತೆ ಅಭಿವೃದ್ಧಿ ಸಮರ್ಪಕವಾಗಿ ಆಗಿಲ್ಲ ಎಂದು ಜನರು ಆರೋಪಿಸಿದ್ದಾರೆ. ಮೂರು ಪ್ರಮುಖ ರಸ್ತೆ ಸಂಪರ್ಕಿಸುವ ಭಾಗಗಳಲ್ಲಿ ಪಾದಚಾರಿ ಮಾರ್ಗ ಇಲ್ಲದಿರುವುದು ಸಾರ್ವಜನಿಕರ ಸುರಕ್ಷತೆಗೆ ಮಾರಕವಾಗಿದೆ.

## ಕ್ಯಾಂಪಸ್ ಸಂದರ್ಶನದಲ್ಲಿ ದಿಕ್ಕು ತಪ್ಪಬೇಡಿ



» ಮೊದಲನೇ ಪುಟದಿಂದ

ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ. ಉದ್ಯೋಗಾಕಾಂಕ್ಷಿಗಳು ಪದವಿಯ ಜೊತೆಗೆ ಇಂಗ್ಲೀಷ್ ಸಂವಹನ ಕೌಶಲ್ಯ ಹಾಗು ವ್ಯಕ್ತಿತ್ವ ವಿಕಸನಕ್ಕೂ ಒತ್ತು ನೀಡಬೇಕು. ಅಂಕಗಳ ಜೊತೆಗೆ ಜ್ಞಾನದ ಸಮನ್ವಯವೂ ಅತ್ಯಂತ ಮುಖ್ಯವಾಗಿದೆ ಎಂದು ಸಲಹೆ ನೀಡಿದರು.

ಈ ವೇಳೆ ಬ್ಯಾಂಕಿಂಗ್ ಹಾಗೂ ಬ್ಯಾಂಕೇತರ ಕ್ಷೇತ್ರಗಳ ಉದ್ಯೋಗಾವಕಾಶಗಳ ಕುರಿತು ವಿದ್ಯಾರ್ಥಿಗಳಿಗೆ ವಿವರವಾದ ಮಾಹಿತಿ ನೀಡಲಾಯಿತು. 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದ ಉದ್ಯೋಗ ಮೇಳದಲ್ಲಿ ಗೋಕುಲ್ದಾಸ್ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್, ಎಸ್.ಎಂ.ಎಫ್.ಜಿ, ಎಸ್.ಎಸ್.ಪಿ.ಎಂ ಪ್ರೈವೇಟ್ ಲಿಮಿಟೆಡ್ ಹಾಗೂ ಜೋಯಾಲುಕ್ಕಾಸ್ ಸೇರಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳು ಭಾಗವಹಿಸಿ ಲಿಖಿತ ಹಾಗೂ ಮೌಖಿಕ ಪರೀಕ್ಷೆಗಳ ಮೂಲಕ ವಿದ್ಯಾರ್ಥಿಗಳ ಸಂದರ್ಶನ ನಡೆಸಿದವು.

ಕಾರ್ಯಕ್ರಮದಲ್ಲಿ ಕಾಲೇಜಿನ ಶೈಕ್ಷಣಿಕ ಡೀನ್ ಡಾ. ಹರೀಶ್ ಎಂ.ಕೆ., ಪರೀಕ್ಷಾ ನಿಯಂತ್ರಕ ಡಾ. ಮುರಳೀಧರ್, ಸ್ನಾತಕೋತ್ತರ ವಿಭಾಗದ ಪ್ಲೇಸ್ಮೆಂಟ್ ಸೆಲ್ ಸಂಯೋಜಕಿ ಡಾ. ಪಿ.ಆರ್.ಶಾಂತ ಹಾಗು ವಿವಿಧ ಕಂಪನಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಎಂ.ಎಸ್.ತೇಜಸ್ವಿನಿಗೆ ಪಿಹೆಚ್.ಡಿ ಪದವಿ

• ಪ್ರಜೋದಯ ವರದಿ




**ಹಾಸನ:** ಚನ್ನರಾಯಪಟ್ಟಣ ತಾಲ್ಲೂಕಿನ ಮಂಡಲೀಕನಹಳ್ಳಿ ಗ್ರಾಮದ ಎಂ.ಎಸ್. ತೇಜಸ್ವಿನಿ ಅವರು ಸಲ್ಲಿಸಿದ ಎ ಸ್ಟಡಿ ಆಫ್ ರೋಡ್ ಟ್ರಾನ್ಸ್‌ಟೇಶನ್ ಇನ್ ಕರ್ನಾಟಕ-ವಿತ್ ಸ್ಪೆಷಲ್ ರೆಫ್ರೆನ್ಸ್ ಟು ಹಾಸನ್ ಡಿಸ್ಟಿಕ್ಟ್ ವಿಷಯದಲ್ಲಿ ಸಮಗ್ರ ಅಧ್ಯಯನ ಎಂಬ ಮಹಾ ಪ್ರಬಂಧಕ್ಕೆ ಶಿವಮೊಗ್ಗಾ ಕುವೆಂಪು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿ ಪ್ರದಾನ ಮಾಡಿದೆ.

ಕುವೆಂಪು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರೊ.ಬಿ.ಜಯರಾಮ ಭಟ್ ಮಾರ್ಗದರ್ಶನದಲ್ಲಿ ಎಂ.ಎಸ್.ತೇಜಸ್ವಿನಿ ಅವರು ಅಧ್ಯಯನ ನಡೆಸಿದ್ದರು. ಶಿವಮೊಗ್ಗಾದ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಬುಧವಾರ ನಡೆದ 35ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಡಾಕ್ಟರೇಟ್ ಪದವಿ ನೀಡಿ ಅಭಿನಂದಿ ಸಿದರು. ತೇಜಸ್ವಿನಿ ಅವರು ಪ್ರಸ್ತುತ ಗದಗದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪತ್ರಕರ್ತ ಪ್ರತಾಪ್ ಹೀರಿಸಾವೆ ಅವರ ಪತ್ನಿಯಾಗಿದ್ದಾರೆ.

ಇವರು ತಮ್ಮ ಅಧ್ಯಯನದಲ್ಲಿ ಹಾಸನ ಜಿಲ್ಲೆಯ ಗ್ರಾಮೀಣ ಭಾಗದ ರಸ್ತೆಗಳ ಪರಿಸ್ಥಿತಿ ಹೇಗಿದೆ, ಗ್ರಾಮೀಣ ಭಾಗದ ರಸ್ತೆಗಳ ಸಂಪರ್ಕ ವ್ಯವಸ್ಥೆ ಹೇಗಿದೆ, ರಸ್ತೆಗಳಿಗೆ ಗ್ರಾಮೀಣ ಭಾಗದ ಜನರ ಜೀವನ ಮಟ್ಟ ಸುಧಾರಿಸಿದೆಯಾ, ರಸ್ತೆಗಳಿಂದ ಜನರ ಆರ್ಥಿಕ ಅಭಿವೃದ್ಧಿ ಆಗಿದೆಯಾ, ಹೀಗೆ ಹಲವು ಅಂಶಗಳನ್ನು ಆಧಾರವಾಗಿಟ್ಟುಕೊಂಡು ಗ್ರಾಮೀಣ ಭಾಗದ ಜನರ ಸಂದರ್ಶನ ಮಾಡಿ ಮಹಾ ಪ್ರಬಂಧ ಸಿದ್ಧಪಡಿಸಿದ್ದರು.

## ಚುನಾವಣಾ ರಾಜಕಾರಣಕ್ಕೆ ಎಚ್.ವಿಶ್ವನಾಥ್ ವಿದಾಯ

• ಪ್ರಜೋದಯ ವರದಿ



**ಮೈಸೂರು:** 50 ಕೋಟಿ ಖರ್ಚು ಮಾಡಿ ಚುನಾವಣೆ ಎದುರಿಸುವಷ್ಟು ಶಕ್ತಿ ನನ್ನಲ್ಲಿ ಇಲ್ಲ. ಹೀಗಾಗಿ ಮುಂದೆ ಯಾವ ಚುನಾವಣೆಗೂ ಸ್ಪರ್ಧಿಸುವು ದಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು ಹೇಳಿದರು.

ನಾನು ಹಲವು ಬಾರಿ ಚುನಾವಣೆ ಎದುರಿಸಿದಾಗ ಜನರೇ ಹಣ ನೀಡಿ ಆಶೀರ್ವಾದ ಮಾಡಿದ್ದರು. ಈಗ ಹಣ ನೀಡಿ ಚುನಾವಣೆ ಎದುರಿಸುವ ಪರಿಸ್ಥಿತಿ ಇದೆ. ಹೀಗಾಗಿ ಚುನಾವಣಾ ರಾಜಕಾರಣಕ್ಕೆ ವಿದಾಯ ಹೇಳುತ್ತಿದ್ದೇನೆ. ಆದರೆ ರಾಜಕೀಯದಲ್ಲಿ ಇರುತ್ತೇನೆಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


## 28 ಪೆಟ್ಟಿಗೆ ಅಂಗಡಿ ತೆರವು: ಪಾಲಿಕೆ ವಿರುದ್ಧ ಆಕ್ರೋಶ

### ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕೆಂದು ವ್ಯಾಪಾರಿಗಳ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ನಗರದ ಕಸ್ತೂರಬಾ ರಸ್ತೆಯಲ್ಲಿ 40 ವರ್ಷಗಳಿಂದ ಇಟ್ಟುಕೊಂಡಿದ್ದ 28 ಪೆಟ್ಟಿಗೆ ಅಂಗಡಿಗಳನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ಏಕಾಏಕಿ ತೆರವುಗೊಳಿಸಿದ್ದಾ ರೆಂದು ಪೆಟ್ಟಿಗೆ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷ ಈಶ್ವರ್ ಅವರು ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ನಗರಸಭೆಯವರು ಪರ್ಯಾಯ ವ್ಯವಸ್ಥೆ ಕಲ್ಪಿಸುವ ಭರವಸೆ ನೀಡಿ ಹಳೇ ಬಸ್ ನಿಲ್ದಾಣದ ಪಿಕ್ಚರ್ ಪ್ಯಾಲೇಸ್ ಎದುರಿನ ಖಾಲಿ ಜಾಗಕ್ಕೆ ಸ್ಥಳಾಂತರಿಸಿದ್ದರು. ಅಲ್ಲಿಯೇ ನಾವು ವ್ಯಾಪಾರ ಮಾಡುತ್ತಿದ್ದೇವು. ಮಳೆ-ಗಾಳಿಗೆ ಅಂಗಡಿಗಳು ಶಿಥಿಲಗೊಂಡ ಹಿನ್ನಲೆ, ವ್ಯಾಪಾರಿಗಳು ಕಳೆದ ಮಾರ್ಚ್‌ನಲ್ಲಿ ನಗರ ಪಾಲಿಕೆಗೆ ಅರ್ಜಿ ಸಲ್ಲಿಸಿ ದುರಸ್ತಿಗೆ ಅನುಮತಿ ಕೋರಿದ್ದರು. ಸ್ಥಳೀಯ ಶಾಸಕರ ಮಧ್ಯಸ್ಥಿಕೆಯಿಂದ ಪಾಲಿಕೆಯಿಂದ ಮೌಖಿಕ ಅನುಮತಿ ಸಿಕ್ಕ ಹಿನ್ನಲೆ ವ್ಯಾಪಾರಿಗಳು ಸ್ವಂತ ಖರ್ಚಿನಲ್ಲಿ ದುರಸ್ತಿ ಮಾಡಿಕೊಂಡಿದ್ದರು. ಆದರೀಗ ದುರಸ್ತಿಗೆ ಅನುಮತಿ ನೀಡಿದ್ದ ಪಾಲಿಕೆಯವರೇ ಆಯುಕ್ತರ ನೇತೃತ್ವದಲ್ಲಿ ಎಲ್ಲಾ 28 ಅಂಗಡಿಗಳನ್ನು ಏಕಾಏಕಿ ತೆರವುಗೊಳಿಸಿದ್ದಾರೆಂದು ಆರೋಪಿಸಿದರು.





ಪಾಲಿಕೆಯವರೇ ದುರಸ್ತಿಗೆ ಅನುಮತಿ ನೀಡಿ, ಈಗ ಅವರೇ ತೆರವು ಮಾಡಿದ್ದಾರೆ. ಇದು ನಮಗೆ ಮಾಡಿದ ದ್ರೋಹ. 40 ವರ್ಷಗಳ ನಮ್ಮ ಬದುಕನ್ನೇ ಕಿತ್ತುಕೊಂಡಿದ್ದು, ಕೂಡಲೇ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಜಿಲ್ಲಾಧಿಕಾರಿ ಮಧ್ಯ ಪ್ರವೇಶಿಸಿ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದು ನ್ಯಾಯ ಒದಗಿಸಬೇಕೆಂದು ಮನವಿ ಮಾಡಿದರು. ಕೂಡಲೇ ನಮಗೆ ಪರ್ಯಾಯ ಜಾಗ ಕೊಡಿ, ಇಲ್ಲದೇ ಹೋದರೆ ದಯಾಮರಣ ನೀಡಿ ಎಂದು ವಿನಂತಿಸಿದರು.

ಸಂಘದ ಕಾರ್ಯದರ್ಶಿ ಅಬ್ದುಲ್ ವಾಜೀದ್, ಪಾಂಡುರಂಗ, ಪ್ರಸಾದ್, ಅನಿಲ್, ಜೈಭೀಮ್ ಬ್ರಿಗ್ರೇಡ್ ಸಂಘಟನೆ ಜಿಲ್ಲಾಧ್ಯಕ್ಷ ರಾಜೇಶ್ ಇದ್ದರು.

## ಮಮತಾ ಬ್ಯಾನರ್ಜಿ ಸೋಲಿಸಿದ್ದಕ್ಕೆ ನನ್ನ ಆಪ್ತನ ಕೊಲೆ

**ಕೋಲ್ಕತ್ತಾ:** ಇತ್ತೀಚಿನ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಭವಾನಿಪುರ ಕ್ಷೇತ್ರದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಿದ್ದಕ್ಕೆ ನನ್ನ ಆಪ್ತ ಸಹಾಯಕ ಚಂದ್ರನಾಥ್ ರಥ್ ಅವರನ್ನು ಕೊಲೆಗೈಯಲಾಗಿದೆ ಎಂದು ಬಿಜೆಪಿಯ ನಾಯಕ ಸುವೇಂದು ಅಧಿಕಾರಿ ಅವರು ಹೇಳಿದ್ದಾರೆ.

ಉತ್ತರ 24 ಪರಗಣ ಜಿಲ್ಲೆಯಲ್ಲಿ ಚಂದ್ರನಾಥ್ ರಥ್ ಅವರನ್ನು ಬುಧವಾರ ರಾತ್ರಿ ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದಾರೆ. ಇದೊಂದು ಪೂರ್ವ ಯೋಜಿತ ಕೃತ್ಯ. ಇದನ್ನು ನಾವು ಎಷ್ಟೇ ಖಂಡಿಸಿದರೂ ಸಾಲದು. ತಪ್ಪಿತಸ್ಥರನ್ನು ಬಂಧಿಸಿ ತಕ್ಕ ಶಿಕ್ಷೆ ನೀಡಬೇಕೆಂಬುದು ಕುಟುಂಬದ ಬೇಡಿಕೆಯಾಗಿದೆ. ಮರಣೋತ್ತರ ಪರೀಕ್ಷೆಯಲ್ಲಿ ನಾಲ್ಕು ಗುಂಡುಗಳನ್ನು ಹಾರಿಸಲಾಗಿದೆ ಎಂದು ತಿಳಿದು ಬಂದಿದೆ ಎಂದಿದ್ದಾರೆ.

## ಉಪನ್ಯಾಸ ಕಾರ್ಯಕ್ರಮ

• ಪ್ರಜೋದಯ ವರದಿ

**ಅರಕಲಗೂಡು:** ಜಿಲ್ಲಾ ಮತ್ತು ತಾಲ್ಲೂಕು ಬರಹಗಾರರ ಸಂಘ, ದೊಡ್ಡಮ್ಮ ದೇವಿ ಕಲಾ ಮತ್ತು ಸಾಂಸ್ಕೃತಿಕ ಸಂಘದ ಸಹಯೋಗದಲ್ಲಿ ಸಾಹಿತಿ ಹಾಗೂ ವಿಶ್ರಾಂತ ಕುಲಪತಿ ದಿ|| ಹೆಚ್.ಜೆ.ಲಕ್ಕಪ್ಪಗೌಡರ ಬದುಕು ಮತ್ತು ಬರಹ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಶುಕ್ರವಾರ (ಮೇ8) ಆಯೋಜಿಸಲಾಗಿದೆ.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಬೆಳಿಗ್ಗೆ 10ಕ್ಕೆ ನಡೆಯುವ ಕಾರ್ಯಕ್ರಮವನ್ನು ಶಾಸಕ ಎ. ಮಂಜು ಅವರು ಉದ್ಘಾಟಿಸಲಿದ್ದು, ತಾಲ್ಲೂಕು ಕಸಾಪ ಮಾಜಿ ಅಧ್ಯಕ್ಷ ವಿಷ್ಣುಪ್ರಕಾಶ್ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಬರಹಗಾರರ ಸಂಘದ ಅಧ್ಯಕ್ಷ ಉಡುವಾರೆ ಡಿ.ಸುಂದರೇಶ್, ಉದ್ಯಮಿ ಯೋಗೇಶ್ ಕಾರ್ಗಿಲ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ವಿ.ಎ. ನಂಜುಂಡಸ್ವಾಮಿ, ಸಾಹಿತಿಗಳಾದ ಗೊರೂರು ಅನಂತರಾಜು, ಎಂ.ಜಿ.ಪರಮೇಶ್ ಪಾಲ್ಗೊಳ್ಳುವರು. ಸಕಲೇಶಪು ರದ ಕವಿಯಿತ್ರಿ ಎಸ್. ಲಲಿತ ಅವರ ಅಂಕುಜ ಕೃತಿ ಬಿಡುಗಡೆ ಹಾಗೂ ರಂಗ ಗೀತೆಗಳ ಗಾಯನ ನಡೆಯಲಿದೆ.

## ಕೇರಳ: ಭಾನುವಾರದೊಳಗೆ ನೂತನ ಸಿ.ಎಂ. ಆಯ್ಕೆ

• ಪ್ರಜೋದಯ ವರದಿ

**ತಿರುವನಂತಪುರ:** ಕೇರಳಂನಲ್ಲಿ ನೂತನ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಕಾಂಗ್ರೆಸ್ ಪಾಲಿಗೆ ಮತ್ತಷ್ಟು ಕಗ್ಗಂಟಾಗಿ ಪರಿಣಮಿಸಿದೆ. ಗುರುವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯ ನಂತರ ಕಾಂಗ್ರೆಸ್ ನಾಯಕರು ಮತ್ತು ಶಾಸಕರು ತಮ್ಮ ಅಭಿಪ್ರಾಯಗಳನ್ನು ಎಐಸಿಸಿ ವೀಕ್ಷಕರಿಗೆ ತಿಳಿಸಿದ್ದಾರೆ.

ನಾನು ನನ್ನ ಅಭಿಪ್ರಾಯಗಳನ್ನು ತಿಳಿಸಿದ್ದೇನೆ. ಭಾನುವಾರದೊಳಗೆ ಅಂತಿಮ ನಿರ್ಧಾರ ಹೊರಬೀಳಲಿದೆ ಎಂದು ವಟ್ಟಿಯೂರ್‌ಕಾವ್ ಕ್ಷೇತ್ರದಿಂದ ಜಯಿಸಿರುವ ಕಾಂಗ್ರೆಸ್‌ನ ಹಿರಿಯ ನಾಯಕ ಕೆ.ಮುರಳೀಧರ್ ಹೇಳಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಯುಡಿಎಫ್ ಪ್ರಚಂಡ ಗೆಲುವು ದಾಖಲಿಸಿತ್ತು. ಕಾಂಗ್ರೆಸ್ 63 ಶಾಸಕರೊಂದಿಗೆ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು.

ಇದಕ್ಕೂ ಮೊದಲು ನಡೆದ ಸಿಎಲ್‌ಪಿ ಸಭೆಯಲ್ಲಿ ಮುಂದಿನ ಮುಖ್ಯಮಂತ್ರಿಯನ್ನು ನಿರ್ಧರಿಸಲು ಪಕ್ಷದ ಹೈಕಮಾಂಡ್‌ಗೆ ಅಧಿಕಾರ ನೀಡುವ ನಿರ್ಣಯವನ್ನು ಅಂಗೀಕರಿಸಲಾ ಯಿತು. ಇದೀಗ ವೀಕ್ಷಕರು ಹೈಕಮಾಂಡ್‌ಗೆ ವರದಿಯನ್ನು ಸಲ್ಲಿಸಲಿದ್ದಾರೆ. ಅವರು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ.

ನೂತನ ಮುಖ್ಯಮಂತ್ರಿ ಆಯ್ಕೆಯಲ್ಲಿ ಶಾಸಕರ ಬೆಂಬಲ ನಿರ್ಣಾಯಕವೆನಿಸಲಿದೆ. ಸಂಸದ ಕೆ.ಸುಧಾರಕರನ್ ಸಹ ಇದೇ ಅಭಿಪ್ರಾಯಯವನ್ನು ವ್ಯಕ್ತಪಡಿಸಿದ್ದಾರೆ. ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮೊದಲು ಪಕ್ಷದ ನಾಯಕರು ಹಾಗೂ ಕಾರ್ಯಕರ್ತರ ಅಭಿಪ್ರಾಯಗಳನ್ನು ಸಂಗ್ರಹಿಸಬೇಕು. ಅವರ ಭಾವನೆಗಳನ್ನು ಪರಿಗಣಿಸಬೇಕೆಂದಿದ್ದಾರೆ.



ಮುಖ್ಯಮಂತ್ರಿ ಗಾದಿಯಲ್ಲಿ ಮುಂಚೂಣಿಯಲ್ಲಿರುವ, ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಮತ್ತು ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಿದ್ದ ವಿ.ಡಿ.ಸತೀಶನ್ ತಮ್ಮ ಅಭಿಪ್ರಾಯಗಳನ್ನು ವೀಕ್ಷಕರ ಮುಂದೆ ಮಂಡಿಸಿದ್ದಾರೆ. ಆದರೆ ವೀಕ್ಷಕರ ಭೇಟಿಯ ಬಳಿಕ ಮಾಧ್ಯಮಗಳ ಮುಂದೆ ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ.

**ವೇಣುಗೋಪಾಲ್‌ಗೆ ಬಹುತೇಕ ಶಾಸಕರ ಬೆಂಬಲ**

ವಿಧಾನಸಭೆಯಲ್ಲಿ ಸ್ಪರ್ಧಿಸದಿದ್ದರೂ ಸಂಸದ ಕೆ.ಸಿ. ವೇಣುಗೋಪಾಲ್ ಅವರಿಗೆ ಬಹುತೇಕ ಶಾಸಕರು ಬೆಂಬಲಿಸುತ್ತಿದ್ದಾರೆ. ಪ್ರಮುಖವಾಗಿ ವಿ.ಡಿ.ಸತೀಶನ್, ಕೆ.ಸಿ.ವೇಣುಗೋಪಾಲ್ ಮತ್ತು ರಮೇಶ್ ಚೆನ್ನಿತ್ತಲ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಕುತೂಹಲಕಾರಿ ಅಂಶ ಎಂದರೆ ಇವರು ಮೂವರೂ ನಾಯರ್ ಸಮುದಾಯಕ್ಕೆ ಸೇರಿದವರಾಗಿದ್ದು, ಕಾಂಗ್ರೆಸ್ ಮುಖಂಡ ಮಾಜಿ ಮುಖ್ಯಮಂತ್ರಿ, ದಿವಂಗತ ಕುರಣಾಕರನ್ ಅವರ ಶಿಷ್ಯರಾಗಿದ್ದಾರೆ.

## ಮಹಿಳೆಯರು, ಮಕ್ಕಳಿಗೆ ದೆಹಲಿ ಅಸುರಕ್ಷಿತ ನಗರ

• ಪ್ರಜೋದಯ ವರದಿ

**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿ ದೇಶದ ಅತ್ಯಂತ ಅಸುರಕ್ಷಿತ ನಗರ ಎಂಬ ಹಣೆಪಟ್ಟಿ ಹೊತ್ತುಕೊಂಡಿದೆ. ಮಹಿಳೆಯರು, ಮಕ್ಕಳು ಮತ್ತು ವೃದ್ಧರಿಗೆ ಇದು ಸುರಕ್ಷಿತ ನಗರವಲ್ಲ ಎಂದು ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ (ಎನ್‌ಸಿಆರ್‌ಬಿ) ಬಿಡುಗಡೆ ಮಾಡಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ.



**ಮಹಿಳೆಯರ ಮೇಲಿನ ದೌರ್ಜನ್ಯ**

ಎನ್‌ಸಿಆರ್‌ಬಿ ಹೊಸದಾಗಿ ಬಿಡುಗಡೆ ಮಾಡಿದ ಅಂಕಿ-ಅಂಶಗಳ ಪ್ರಕಾರ, 2024ರಲ್ಲಿ ಮಹಿಳೆಯರ ವಿರುದ್ಧ 13,396 ಅಪರಾಧ ಪ್ರಕರಣಗಳು ದಾಖಲಾಗಿವೆ. ಇದು ದೇಶದ 19 ಮಹಾನಗರ ಗಳಲ್ಲೇ ಅತಿ ಹೆಚ್ಚು. ಅದರಲ್ಲಿ 1,058 ಅತ್ಯಾಚಾರ ಮತ್ತು 3,974 ಅಪಹರಣ ಪ್ರಕರಣಗಳು ಸೇರಿವೆ. ಹಿರಿಯ ನಾಗರಿಕರ ವಿರುದ್ಧದ 1,267 ಪ್ರಕರಣಗಳು ದಾಖಲಾಗಿವೆ.

**ಮಕ್ಕಳ ವಿರುದ್ಧದ ಅಪರಾಧ**

ದೆಹಲಿಯಲ್ಲಿ ಮಕ್ಕಳ ವಿರುದ್ಧದ 7,662 ಅಪರಾಧ ಪ್ರಕರಣಗಳು ದಾಖಲಾಗಿವೆ. ವಿಪ ರ್ಯಾಸವೆಂದರೆ, ಮಕ್ಕಳೇ ಎಸಗಿದ ಅಪರಾಧಗ ಳಲ್ಲೂ (2,306 ಪ್ರಕರಣಗಳು) ದೆಹಲಿ ಅಗ್ರಸ್ಥಾನ ದಲ್ಲಿದೆ.

**ಕಳ್ಳತನದ ರಾಜಧಾನಿ**

ದೆಹಲಿಯಲ್ಲಿ1,80,973 ಕಳ್ಳತನದ ಪ್ರಕರಣ ಗಳು ದಾಖಲಾಗಿದ್ದು, ಸರಾಸರಿ ದಿನಕ್ಕೆ 497 ಪ್ರಕರ ಣಗಳು ದಾಖಲಾಗುವುದರೊಂದಿಗೆ ದೆಹಲಿ ಭಾರತದ ಕಳ್ಳತನದ ರಾಜಧಾನಿ ಎಂಬ ಕುಖ್ಯಾತಿ ಪಡೆದಿದೆ. ಎನ್‌ಸಿಆರ್‌ಬಿ 2024ರ ದತ್ತಾಂಶದ ಪ್ರಕಾರ, ರಾಜಧಾನಿಯಲ್ಲಿ ಮಹಿಳೆಯರ ಅಪಹರಣ, ಅತ್ಯಾಚಾರ ಮತ್ತು ವರದಕ್ಷಿಣೆ ಸಾವು ಪ್ರಕರಣಗಳು ಸಹ ಕಳವಳಕಾರಿಯಾಗಿವೆ. 1,058 ಅತ್ಯಾಚಾರ ಮತ್ತು 3,974 ಅಪಹರಣ ಪ್ರಕರಣಗಳು ದಾಖಲಾಗಿವೆ.

**ಕೊಲೆ ಪ್ರಕರಣ**

2023ರಲ್ಲಿ 506 ಕೊಲೆ ಪ್ರಕರಣಗಳು ದಾಖಲಾಗಿದ್ದವು. 2024ರಲ್ಲಿ ಇವುಗಳ ಸಂಖ್ಯೆ 504ಕ್ಕೆ ಇಳಿದಿವೆ. ಆದರೂ, ಕೊಲೆ ಪ್ರಕರಣಗಳ ಪ್ರಮಾಣ (ಲಕ್ಷಕ್ಕೆ 2.3) ರಾಷ್ಟ್ರೀಯ ಸರಾಸರಿಗಿಂತ (1.9) ಹೆಚ್ಚಿದೆ.

**ಅಪರಾಧ ಪ್ರಮಾಣ ಶೇ.6 ರಷ್ಟು ಇಳಿಕೆ**

ಎನ್‌ಸಿಆರ್‌ಬಿದತ್ತಾಂಶದ ಪ್ರಕಾರ, ಭಾರತದಾ ದ್ಯಂತ ಒಟ್ಟಾರೆ ಅಪರಾಧ ಪ್ರಕರಣಗಳಲ್ಲಿ ಶೇ.6 ರಷ್ಟು ಇಳಿಕೆ ಕಂಡುಬಂದಿದೆ.

**ಒಟ್ಟು ಪ್ರಕರಣಗಳು:** 2023ರಲ್ಲಿ 62.41 ಲಕ್ಷ ಪ್ರಕರಣಗಳಿದ್ದರೆ, 2024 ರಲ್ಲಿ 58.85 ಲಕ್ಷಕ್ಕೆ ಇಳಿಕೆಯಾಗಿದೆ.

**ಅಪರಾಧ ದರ**

ಪ್ರತಿ ಲಕ್ಷ ಜನಸಂಖ್ಯೆಗೆ ದಾಖಲಾಗುವ ಪ್ರಕರಣಗಳ ಸಂಖ್ಯೆ 448.3 ರಿಂದ 418.9 ಕ್ಕೆ ಇಳಿಕೆ ಯಾಗಿದೆ. ದೇಶದಾದ್ಯಂತ ಅಪರಾಧ ಪ್ರಕರಣಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದ್ದರೂ, ದೆಹಲಿ ಮಾತ್ರ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಯ ವಿಷಯದಲ್ಲಿ ಈಗಲೂ ಅಪಾಯಕಾರಿ ನಗರವಾಗಿಯೇ ಉಳಿದಿದೆ ಎಂದೂ ವರದಿಯಲ್ಲಿ ಹೇಳಲಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK